Madam SPEAKER:—The question is :

" That the KARANATAKA Approration (No. 2, Bill, 1974 be passed. "

Motion was adopted, and The Bill was passed.

THE KARNATKA HOUSING BOARD (Amendment) Bill 1974-Motion to Consider

(Debate Continued)

ಶ್ರೀ ಟಿ. ಆರ್. ಶಾಮಣ್ಣ (ಕೋಟೆ) :—ಮಾನ್ಯ ಸಭಾಧ್ಯಕ್ಷಣೀಯವರೇ, ಈಗ ಕರ್ನಾಟಕ ಹೌಸಿಂಗ್ ಬೋರ್ಡು ವಿಚಾರದಲ್ಲಿ ಹಿಂದೆ ಮಾತನಾಡಿದ ಸ್ನೇಹಿತರುಗಳು ಸಾಕಾದಷ್ಟು ವಿಷಯಗಳನ್ನು ಈಗಾಗಲೇ ಹೇಳಿದ್ದಾರೆ. ಈಗ ನನ್ನ ಅರಿಕೆಯಾದರೂ ಇಷ್ಟೆ, ನಮ್ಮ ರಾಜ್ಯದಲ್ಲಿ ಬಡವರಿಗೆ, ಮಧ್ಯಮ ವರ್ಗದವರಿಗೆ ವಸತಿ ಸೌಕರ್ಯಗಳನ್ನು ಮಾಡಿಕೊಡಬೇಕು ಎನ್ನತಕ್ಕಂಥ ಒಂದು ಸದುದ್ದೇಶದಿಂದ ಗೃಹಮಂಡಲಿಯನ್ನು ಜಾರಿಗೆ ತೆಗೆದುಕೊಂಡು ಬಂದಿದ್ದಾರೆ. ಅದರಲ್ಲಿಯೂ ಮುಖ್ಯವಾಗಿ ಷೆಡ್ಯೂಲ್‌ಕಾಸ್ಟ್ಸ ಮತ್ತು ಷೆಡ್ಯೂಲ್ ಟ್ರೈಬ್ಸ್ ಮತ್ತು ಬಡವರಾಗಿರತಕ್ಕಂಥವರಿಗೆ ಮನೆಗಳನ್ನು ಕಟ್ಟಿಸುವ ಸೌಕರ್ಯಕ್ಕೆ ಆದ್ಯತೆಯನ್ನು ಕೊಡಬೇಕು ಎನ್ನುವುದರ ಬಗ್ಗೆ ಕೆಲವು ನಿಯಮಗಳನ್ನು ಇಲ್ಲಿ ತೆಗೆದುಕೊಂಡು ಬಂದಿದ್ದಾರೆ. ಈ ಮಸೂದೆಯ ಪ್ರಕಾರ ಈ ಮಸೂದೆ ನವೆಂಬರ್ ೧೯೭೩ ರಲ್ಲಿಯೇ ಜಾರಿಗೆ ಬರಬೇಕು ಎನ್ನತಕ್ಕಂಥಾದ್ದು ಇದೆ. ಈಗ ಅನೇಕರು ತಮ್ಮ ಆಸ್ತಿಪಾಸ್ತಿಗಳನ್ನು ಅಡವ್ರೋ ಅಥವಾ ಮಾರಾಟ ಮಾಡಿ ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಬೆಂಗಳೂರು ನಗರದ ಟ್ರಸ್ಟ್ ಬೋರ್ಡಿನಿಂದ ಸೈಟುಗಳನ್ನು ತೆಗೆದುಕೊಂಡಿದ್ದಾರೆ. ಇದರ ಒಂದು ನಿಬಂಧನೆಯ ಪ್ರಕಾರ ಆರು ತಿಂಗಳೊಳಗಾಗಿ ಮನೆಗಳನ್ನು ಆ ಸೈಟಿನಲ್ಲಿ ಕಟ್ಟಿಸದೆ ಹೋದರೆ ಸೈಟನ್ನು ವಾಪಸ ತೆಗೆದುಕೊಳ್ಳುತ್ತೇವೆ ಎಂದು ಇದೆ. ನಾನು ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿಕೊಳ್ಳತಕ್ಕದ್ದು ಇಷ್ಟೆ, ತಾವು ಇದನ್ನು ಸ್ವಲ್ಪ ಸಮಗ್ರವಾಗಿ ಪರಿಶೀಲನೆ ಮಾಡಿ ಅದುವರೆಗೂ ಯಾರು ಯಾರು ಅರ್ಜಿಗಳನ್ನು ಕೊಟ್ಟಿರುತ್ತಾರೋ ಅಂಥವರಿಗೆ ಸರಿಯಾದ ಅರ್ಹತೆ ಉಳ್ಳವರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ ಹಣ ಸಹಾಯವನ್ನು ಮಾಡಿಕೊಟ್ಟು ಈ ಮೂಲಕ ಅವರು ಅನುಕೂಲತೆಯನ್ನು ಪಡೆಯಬೇಕು ಎನ್ನುವ ರೀತಿಯಲ್ಲಿ ತಾವು ಕೆಲಸ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಈ ಹಿಂದೆ ಹೌಸಿಂಗ ಬೋರ್ಡಿನವರು ಯಾವ ಹಣ ಸಹಾಯವನ್ನು ಸಹಾಯವನ್ನು ಜನರಿಗೆ ಕೊಡಕೂಡದು ಎಂದ ಮಾಡಿದ್ದರು, ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಮಾರ್ಚಿ ೭೩ ರವರೆಗೆ ಇದಕ್ಕೆ ಯಾರು ಯಾರು ಅರ್ಜಿಗಳನ್ನು ಹಾಕಿದ್ದರೋ ಅಂಥವರಿಗೆ ಮನ್ನಣೆ ಕೊಟ್ಟು ಹಣ ಸಹಾಯ ಸಿಕ್ಕುವಂತೆ ಮಾಡುತ್ತೇವೆಂದು ಹೇಳಿದರು. ಆದ್ದರಿಂದ ನಾನು ಕೇಳಿಕೊಳ್ಳುವದು ಇಷ್ಟೆ ಇದುವರೆಗೂ ಯಾರು ಯಾರು ಅಪ್ಲಿಕೇಶನ್ಸ ಹಾಕಿದ್ದಾರೋ ಅಂಥವರಿಗೆ. ಅರ್ಹತೆಯುಳ್ಳ ಬಡಜನರಿಗೆ, ಸಾಲ ತಿರುಗಿ ಕೊಡತಕ್ಕಂಥವರಿಗೆ ಅನುಕೂಲವಾಗುವ ಹಾಗೆ ಹಣ ಸಹಾಯವನ್ನು ಮಂಡಲಿಯವರು ಒದಗಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಮನೆಗಳನ್ನು ಕಟ್ಟತಕ್ಕವರಿಗೆ. ಹಣದ ರೂಪದಲ್ಲಿ ಕೊಡದೆ, ಮನೆಯನ್ನೇ ಕೊಡಬೇಕು ಎನ್ನುವ ನಿಯಮವನ್ನು ಇವರು ತೆಗೆದುಕೊಂಡು ಬಂದಿದ್ದಾರೆ. ಆದರೆ ಇದು ಸರ್ಕಾರದವರಿಗೆ ಬಹಳ ಕಷ್ಟದ ಕೆಲಸವಾಗುತ್ತದೆ. ಈ ಉದ್ಯಮವನ್ನು ಸರ್ಕಾರದವರು ತೆಗೆದುಕೊಳ್ಳಲಿ, ಇದರ ಜೊತೆಗೆ ಜನರಿಗೆ ಹಣದ ರೂಪದಲ್ಲಿ ಸಹಾಯವನ್ನು ಕೊಡತಕ್ಕ ಹಾಗೆ ಮಾಡಬೇಕೆಂದು ಇದರ ಬಗ್ಗೆ ಸಹಾನುಭೂತಿಯಿಂದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ :—(ಮಲ್ಲೇಶ್ವರಂ) ಸನ್ಮಾನ್ಯ ಸಭಾಧ್ಯಕ್ಷಣೀಯವರೇ, ಕರ್ನಾಟಕ ಹೌಸಿಂಗ ಬೋರ್ಡಿನ ತಿದ್ದುಪಡಿಯ ಮಸೂದೆಯ ಬಗ್ಗೆ ಎರಡು ಮೂರು ವಿಷಯಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಮಸೂದೆಯನ್ನು ಮಾನ್ಯ ಬಸವಲಿಂಗಪ್ಪನವರು ತರುತ್ತೇವೆಂದು ಹೇಳಿದ್ದರು. ಆದರೆ ಈ ಹೊಣೆಯನ್ನು ಮಾನ್ಯ ರಂಗನಾಥ ಅವರ ಮೇಲೆ ಹೊರಿಸಿದ್ದಾರೆ. ಈ ಮಸೂದೆಯನ್ನು ನಾನು ಓದಿದ ಮೇಲೆ ನನಗೆ ಬಂದಿರುವ ಅಭಿಪ್ರಾಯವೇನೆಂದರೆ, ಕೂಡಿಕೊಂಡಂಥ ಹೆಂಡತಿ ಬಿಟ್ಟು ಎರಡನೆಯ ಹೆಂಡತಿಯ ಮೇಲೆ ಮೋಹ ಹೋಗಿ ಮೊದಲನೆಯ ,ಹೆಂಡತಿಯನ್ನು ಬಿಡುವಂಥ ಪರಿಸ್ಥಿತಿ ಬಂದ ಹಾಗೆ

ಈ ತಿದ್ದುಪಡಿಗೆ ಆಗಿದೆ. ಇಂಥ ಒಂದು ಅಭಿಪ್ರಾಯ ನನಗೆ ಬರುವುದಕ್ಕೆ ಅವಕಾಶವಾಗಿದೆ. ಈ ಮಸೂದೆಯ ಮೇಲೆ ಹಿಂದೆ ಇದೇ ವಿಧಾನ ಸಭೆಯಲ್ಲಿ ಬೇಕಾದಷ್ಟು ಚರ್ಚೆ ನಡೆದಿದೆ. ಚರ್ಚೆಯಲ್ಲಿ ಆವೊತ್ತಿನ ದಿವಸ ಚೇರ್ಮನ್ನರು, ಜನಗಳು, ಪ್ರತಿನಿಧಿಗಳು ಆಗಬೇಕು ಅದರಲ್ಲೂ ಹೌಸಿಂಗ ಬೋರ್ಡನಂಥ ಸಂಸ್ಥೆಯಲ್ಲಿ ಜನತಾ ಪ್ರತಿನಿಧಿ ಇದ್ದರೆ ಮಾತ್ರ ಜನಗಳ ಅಭಿಷ್ಟೆಯನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಯಾವುದನ್ನು ಬ್ಯೂರೋಕ್ರಸಿ ಎಂದು ಕರೆಯುತ್ತೇವೆಯೋ ಆ ಬ್ಯೂರೋಕ್ರಸಿ ಹೋಗುತ್ತದೆ. ಎನ್ನುವ ತೀರ್ಮಾನಕ್ಕೆ ಬಂದಿದ್ದರು. ಆದ್ದರಿಂದ ಚೇರ್ಮನ್ನರು ಹೊರಗಡೆಯವರು ಇರಬೇಕು. ಅಂಥವರಿಗೆ ಅಧಿಕಾರಗಳನ್ನು ಕೊಡಬೇಕು ಎಂದು ವಿಪುಲವಾದ ಚರ್ಚೆ ನಡೆಯಿತು. ನಾನು ಅದನ್ನು ಓದುವುದಕ್ಕೆ ಹೋಗುವುದಿಲ್ಲ. ಈಗ ಇದೇ ಮನೆಯಲ್ಲಿ ಏನು ಒಂದು ಅಭಿಪ್ರಾಯ ಬಂದಿದೆ ಎಂದರೆ, ಚೇರ್ಮನ್‌ರಿಗೆ ಯೋಗ್ಯತೆ ಇರುವದಿಲ್ಲ ಎಲ್ಲಾ ಅಧಿಕಾರವನ್ನು ಒಬ್ಬ ಹೌಸಿಂಗ್ ಕಮೀಷನರ್‌ಗೆ ಕೊಟ್ಟುಬಿಟ್ಟು ಕಮೀಷನರಿಂದ ತಮ್ಮ ಎಲ್ಲಾ ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ಅರ್ಹತೆ ಇರುತ್ತದೆ ಎನ್ನುವ ಅಭಿಪ್ರಾಯವನ್ನು ಇವರು ಇಟ್ಟುಕೊಂಡಿದ್ದಾರೆ. ಈ ಮಸೂದೆಯನ್ನು ಮೊದಲಿನಿಂದಲೂ ಕಡೆಯವರೆಗೂ ನೋಡಿದರೆ ಚೇರ್ಮನ್‌ಗೆ ಇದ್ದ ಅಧಿಕಾರವನ್ನು ಎಲ್ಲಾ ಕಿತ್ತು ಹಾಕಿ, ಹೌಸಿಂಗ ಕಮೀಷನರ್‌ಗೆ ಕೊಡಲಾಗಿದೆ. ಈ ಒಂದು ಧೋರಣೆ, ಇಂಥ ಒಂದು ಅಪ್ರೋಚ್ ಈ ಒಂದು ವಿರೋಧಾಭಾಸ ಏಕೆ ಬಂತು ಎನ್ನುವುದು ಮುಖ್ಯ ಪ್ರಶ್ನೆ. ಇದು ಬಂದಿರುವುದಕ್ಕೆ ಕಾರಣ ಏನೆಂದರೆ ಹಿಂದೆ ಇದ್ದಂಥ ಚೇರ್ಮನ್ ಅವರು ಒಂದು ಪಕ್ಷಕ್ಕೆ ಸೇರಿದ್ದರು, ಮಾನ್ಯ ಬಸವಲಿಂಗಪ್ಪನವರು ಇನ್ನೊಂದು ಪಕ್ಷಕ್ಕೆ ಸೇರಿದ್ದರು ಇವರಿಬ್ಬರಿಗೂ ಜಗಳ ಬಂತು. ಆದ್ದರಿಂದ ಅವರ ವೈಮನಸ್ಸು ಉಂಟಾಗಿ ಇವರಿಗೆ ಅಧಿಕಾರ ಬೇಡ, ಅಧಿಕಾರವನ್ನು ಕೊಡಕೂಡದು ಅವರನ್ನು ಕಿತ್ತುಹಾಕುವುದಕ್ಕೆ ಪ್ರಯತ್ನಪಟ್ಟು ತೊಂದರೆಯುಂಟಾಗಿ ಆ ತೊಂದರೆ ಏಕೆ ಎಲ್ಲಾ ಅಧಿಕಾರವನ್ನು ಅಧಿಕಾರಿಗಳಿಗೆ ಬಿಡೋಣ ಎಂದು ತೀರ್ಮಾನ ಮಾಡಿಕೊಟ್ಟು ಇವತ್ತಿನ ದಿವಸ ಈ ಮಸೂದೆಯನ್ನು ತೆಗೆದುಕೊಂಡು ಬಂದಿದ್ದಾರೆ.

ಇಷ್ಟೊಂದು ಆತುರ ಆತುರವಾಗಿ ಮಾಡುವ ಪ್ರವೃತ್ತಿ ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ ಅದರಲ್ಲೂ ಮನೆಗಳನ್ನು ಬಡವರಿಗೆ. ಮನೆಯಿಲ್ಲದವರಿಗೆ ಕಟ್ಟಿಕೊಡಬೇಕು ಎಂಬ ಒಂದು ಒಳ್ಳೆಯ ಉದ್ದೇಶದಿಂದ ಲೇಬರ್ ಹೌಸಿಂಗ್ ಸ್ಕೀಂ, ಮಿಡ್ಲ ಇನ್‌ಕಂ ಗ್ರೂಪ್ ಹೌಸಿಂಗ್ ಸ್ಕೀಂ ಮುಂತಾದ್ದನ್ನು ಕೈಕೊಂಡು ಮನೆ ಕಟ್ಟಿಕೊಳ್ಳುವವರಿಗೆ ಸಾಲ ಕೊಡಬೇಕು ಎಂಬ ಅಭಿಪ್ರಾಯದಿಂದ ಮೊದಲು ಹೌಸಿಂಗ್ ಬೋರ್ಡಿಗೆ ಸಂಬಂಧಪಟ್ಟ ವಿಧೇಯಕವನ್ನು ಅಂಗೀಕಾರ ಮಾಡಲಾಗಿತ್ತು. ಅದನ್ನೆಲ್ಲಾ ಬಿಟ್ಟು ಈಗೇನು ಮಾಡಿದ್ದೀರಿ ಅಂದರೆ ಎಲ್ಲ ಅಧಿಕಾರವನ್ನೂ ಅಧಿಕಾರಿಗಳಿಗೆ ಕೊಡಬೇಕು ಎಂದು ಹೊರಟಿದ್ದಾರೆ. ಇದಕ್ಕೆ ಕಾರಣ ಒಬ್ಬ ಮಂತ್ರಿಗಳಿಗೂ ಛೇರ್ಮನ್ನರಿಗೂ ಮನಸ್ತಾಪ ಬಂದು ತೊಂದರೆಯಾಯಿತು ಎಂಬುದು. ಇದು ನಿಜವಾಗಿಯೂ ಜನಸಾಮಾನ್ಯರಿಗೆ ಸಹಾಯವಾಗುವಂಥ ಮಸೂದೆಯಲ್ಲ. ಯೋಚನೆ ಮಾಡಿ ತಂದಿದ್ದರೆ ಜನರಿಗೆ ಸಹಾಯವಾಗುವಂತೆ ಅನೇಕ ತಿದ್ದುಪಡಿಗಳನ್ನು ತರಬಹುದಾಗಿತ್ತು. ಇದು ಆತುರ ಆತುರವಾಗಿ ಒಬ್ಬರಿಂದ ಪವರ್ ಕಿತ್ತುಕೊಂಡು ಇನ್ನೊಬ್ಬರಿಗೆ ಕೊಡಲು ತಂದಿರುವ ಶಾಸನದಂತೆ ಕಾಣುತ್ತದೆ. ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಕೊಟ್ಟಿರುವ ಮಸೂದೆ ಇದು. ಇದನ್ನು ವಿರೋಧ ಪಕ್ಷದ ಮಾನ್ಯ ಸ್ನೇಹಿತರು ಮಾತನಾಡುವಾಗ ತಿಳಿಸಿದ್ದಾರೆ. ಈ ರೀತಿ ಮಸೂದೆ ತಂದು ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಹಾಕುವುದು ಉಚಿತವಲ್ಲ. ಕೆಲವು ವಿಷಯಗಳಲ್ಲಿ ನಾನು ಭಿನ್ನಾಭಿಪ್ರಾಯವನ್ನು ವ್ಯಕ್ತ ಮಾಡಬೇಕಾಗಿದೆ. ಒಂದು ಪಕ್ಷ ಕಮೀಷನರಿಗೆ ಕೊಡುವುದಕ್ಕೆ ಬದಲಾಗಿ ಎಲ್ಲಾ ಅಧಿಕಾರವನ್ನು ಛೇರ್ಮನ್ನರಿಗೇ ಕೊಟ್ಟರೆ ಹೌಸಿಂಗ್ ಬೋರ್ಡ ಚನ್ನಾಗಿ ನಡೆಯುತ್ತದೆ ಎಂದು ಯಾರಾದರೂ ಹೇಳಿದರೆ ನಾನು ಒಪ್ಪುವುದಿಲ್ಲ. ಛೇರ್ಮನ್ ಯಾರೇ ಇರಲಿ, ಅವರು ಒಬ್ಬ ಎಂ. ಎಲ್. ಎ. ಆಗಿರಬಹುದು ಅಥವಾ ಬೇರೆ ಯವರಿರಬಹುದು. ಅದರಿಂದ ಎಲ್ಲಾ ಪ್ರಕರಣಗಳೂ ಬಗೆಹರಿಯುತ್ತವೆ, ಸುಸೂತ್ರವಾಗಿ ಕೆಲಸವಾಗುವುದು. ಗುರಿ ಯಾವುದಿಟಿ ಅದು ಸಾಧನೆಯಾಗುವುದು ಎಂಬ ಅಭಿಪ್ರಾಯವಿದ್ದರೆ ಅದು ಸರಿಯಲ್ಲ. ಏಕೆಂದರೆ ಯಾರನ್ನು ಛೇರ್ಮನ್ ಮಾಡುತ್ತೀರಿ ಎಂಬುದು ಮುಖ್ಯವಾದುದು. ಯಾರು ಸಮತಾವಾದದ ತತ್ವಕ್ಕೆ ಸರಿಯಾಗಿ ಗಮನಕೊಡುವರೋ ಯಾರು ವಸತಿಗೃಹಗಳು ಹೆಚ್ಚಬೇಕು, ಅದರಲ್ಲೂ ಬಡವರಿಗೆ ಹೆಚ್ಚು ಅನುಕೂಲ ಮಾಡಬೇಕು, ಇರುವ ಯೋಜನೆ ಸರಿಯಾಗಿ ಕಾರ್ಯರೂಪಕ್ಕೆ ತರಬೇಕು ಅಂಥವರಿದ್ದರೆ ಮಾತ್ರ ಸಂಸ್ಥೆ ಮುಂದುವರೆಯಲು ಸಾಧ್ಯ. ಈ ಬೋರ್ಡಿನಲ್ಲಿ ಇರುವವರಿಗೆ ತಮ್ಮ ಸ್ವಂತ ಹಿತದೃಷ್ಟಿಯಿಂದ ತಮಗೆ ಅನುಕೂಲ ಮಾಡಿಕೊಳ್ಳಲು ಅವಕಾಶಗಳು ಸಹ ಇವೆ. ಒಬ್ಬ ಅಧಿಕಾರಿ, ಛೇರ್ಮನ್ ಅಥವಾ ಕಮಿಷನರ್ ತನಗೆ ಬೇಕಾದ ಅನುಕೂಲ ಮಾಡಿಕೊಳ್ಳಬಹುದು. ಸ್ಕೀಂ ಮಾಡುವಾಗ ಕಂಟ್ರಾಕ್ಟರಿಗೆ ವಹಿಸುವಾಗ ತಮಗೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಳ್ಳಲು ಛೇರ್ಮನ್ ಮುಂತಾದವರಿಗೆ ಅವಕಾಶವಿದೆ. ಇಂದು ಸಮಾಜದಲ್ಲಿ ಅದಕ್ಕೆ ಹೆಚ್ಚಿನ ಅವಕಾಶಗಳಿವೆ. ಈ ದಿವಸ ಸಮಾಜದಲ್ಲಿ ಅನ್ಯಾಯಗಳು, ಅಕ್ರಮಗಳು, ಲಂಚ, ಸ್ವಜನ ಪಕ್ಷಪಾತ ತಾಂಡವಾಡುತ್ತಿವೆ. ಆದುದರಿಂದ ಸಮತಾವಾದದ ತತ್ವದಲ್ಲಿ ನಿಷ್ಟೆ ಇರುವವರನ್ನು ಛೇರ್ಮನ್ ಮಾಡಿದರೆ ಅನುಕೂಲವಾಗುವುದೇ ಹೊರತು

ಯಾರನ್ನೋ ಮಾಡಿದರೆ ಯೋಜನೆ ಸರಿಯಾಗಿ ಕಾರ್ಯಗತವಾಗುವುದಿಲ್ಲ. ಈ ದೃಷ್ಟಿಯಿಂದ ಕಮಿಷನರಿಗೆ ಹೆಚ್ಚು ಅಧಿಕಾರ ಕೊಟ್ಟಿರುವುದು ತಪ್ಪು. ಬರೀ ಛೇರ್ಮನ್ ಇರಬೇಕೆಂದು ಹೇಳಿದರೆ ಸಾಲದು, ಸ್ಪಷ್ಟ ವಾಗಿರುವುದಿಲ್ಲ. ಕಮಿಷನರಿದ್ದರೆ ಎಲ್ಲಾ ಕಾರ್ಯಗತ ಮಾಡುವುದಕ್ಕಾಗುತ್ತದೆಯೇ, ಅಡ್ಡಿ ಆತಂಕಗಳು ಬರುವುದಿಲ್ಲವೇ ಎಂಬುದನ್ನು ಯೋಚಿಸಬೇಕು. ಇದು ಅಧಿಕಾರಿಗಳ ಮೇಲೆ ಅವಲಂಬಿಸಿದೆ. ಇಂದು ಇರುವ ಐ. ಎ. ಎಸ್. ಅಧಿಕಾರಿಗಳಿಗೆ ಅಧಿಕಾರಷಾಹಿ ಮನೋಭಾವನೆಯಿದೆ. ಜನರ ಸಂಪರ್ಕ ಬೆಳೆಸಿ ಅವರ ಕಷ್ಟ-ಸುಖವನ್ನರಿತು ಅವರಿಗೆ ಬೇಕಾದ ಅನುಕೂಲ ಮಾಡಿಕೊಡುವ ಪ್ರವೃತ್ತಿ ಅವರಲ್ಲಿ ಕಂಡು ಬಂದಿಲ್ಲ. ಹಳೆಯ ಕಾಲದ ಬ್ರಿಟಿಷರ ಕಾಲದ ಮನೋಭಾವನೆ ಅವರಲ್ಲಿದೆ. ಸಮತಾವಾದಿ ತತ್ತ್ವವನ್ನು ಅನೇಕರು ಒಪ್ಪದಿರುವ ಪರಿಸ್ಥಿತಿಯಿದೆ. ಹೀಗೆ ಬ್ಯೂರೋಕ್ರಾಟಿಕ್ಕಾಗಿ ಎಲ್ಲ ಅಧಿಕಾರವನ್ನು ಕಮಿಷನರಿಗೆ ಕೊಟ್ಟರೆ ಅದರಿಂದ ಇರುವ ಸಮಸ್ಯೆಯು ಬಗೆಹರಿಯುವುದಿಲ್ಲ; ಬೋರ್ಡೂ ಮುಂದುವರೆಯುವುದಿಲ್ಲ. ಕಮಿಷನರಿದ್ದರೆ ಎಲ್ಲಾ ಸರಿಹೋಗುವುದೆಂಬ ಅಭಿಪ್ರಾಯದಿಂದ ಅವರಿಗೆ ಹೆಚ್ಚು ಅಧಿಕಾರ ಕೊಡುವಂತೆ ಈ ಬಿಲ್ಲನ್ನು ತಂದಿರುವುದಾದರೆ ಸರಿಯಾಗಿರುವುದಿಲ್ಲ. ಇದರಿಂದ ಅನುಕೂಲವಾಗುವುದಿಲ್ಲ. ಮೂಲ ಭೂತವಾಗಿ ನೋಡಿದರೆ ಈ ಮಸೂದೆಯಲ್ಲಿ ಅನೇಕ ನ್ಯೂನತೆಗಳಿವೆ. ಇದು ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟನ್ನು ಹಾಕುವುದು. ಮೂಲಭೂತವಾದ ಅಪ್ರೋಚ್ ಸರಿಯಿಲ್ಲ.

ಇನ್ನೊಂದು ವಿಷಯ. ನಮ್ಮ ದೇಶದಲ್ಲಿ ಇಂದು ಅಧಿಕಾರಷಾಹಿ ಮನೋಭಾವ ಇರುವವರಿದ್ದಾರೆ ಟೆಕ್ನೋಕ್ರಾಟ್ಸ್ ಎಂದರೆ ತಜ್ಞರಿದ್ದಾರೆ. ಇಂದು ಬ್ಯೂರೋಕ್ರಾಟ್ಸ್ ಮತ್ತು ಟೆಕ್ನೋಕ್ರಾಟ್ಸ್‌ಗೂ ವಿವಾದ ವಿದೆ. ಹಾಗಿರುವಾಗ ಛೇರ್ಮನ್ ಯಾರಿರಬೇಕು, ಎಂ. ಎಲ್. ಎ. ಅಥವಾ ಆಡಳಿತ ಪಕ್ಷದವರು ಯಾರಾ ದರೂ ಇದ್ದರೆ ಸಾಕೇ, ತಜ್ಞರು, ರಿಟೈರ್ಡ್ ಚೀಫ್ ಎಂಜಿನಿಯರು ಎಷ್ಟೋ ಮಂದಿ ಇದ್ದಾರೆ, ಅವರಲ್ಲಿ ಯಾರಾದರೂ ಇದ್ದರೆ ಸಾಕೇ ಎಂಬ ಪ್ರಶ್ನೆ ಬರುವುದು. ಆದಷ್ಟುಮಟ್ಟಿಗೆ ತಾಂತ್ರಿಕ ತಜ್ಞರನ್ನು ಸೇರಿಸಿ ಒಂದು ಬೋರ್ಡನ್ನು ಮಾಡಿದರೆ ಇನ್ನೂ ಅನುಕೂಲವಾಗಬಹುದು ಎಂಬುದು ನನ್ನ ಅಭಿಪ್ರಾಯ. ಛೇರ್ಮನ್‌ಗೂ, ಕಮಿಷನರಿಗೂ ವೈಮನಸ್ಸು ಬಂದರೆ ಹೇಗೆ ಬಗೆಹರಿಸುವುದು ಎಂಬುದನ್ನು ಯೋಚಿಸ ಬೇಕು. ಹಾಗೆ ಬಂದುದರಿಂದಲೇ ಈಗ ತಿದ್ದುಪಡಿ ವಿಧೇಯಕ ತಂದಿದ್ದಾರೆ. ಆ ದೃಷ್ಟಿಯಿಂದ ಈ ಬಿಲ್ಲನ್ನು ತಂದು ಎಲ್ಲಾ ಅಧಿಕಾರವನ್ನೂ ಅಡ್ಮಿನಿಸ್ಟ್ರೇಟಿವ್ ಮತ್ತು ಎಗ್ಜಿಕ್ಯೂಟಿವ್‌ಗೆ ಸಂಬಂಧಪಟ್ಟ ಎಲ್ಲಾ ಅಧಿಕಾರವನ್ನೂ ಕಮಿಷನರಿಗೆ ಕೊಡುವುದಾದರೆ ಛೇರ್ಮನ್ ಏಕಿರಬೇಕು? ನಾಮ್ಕಾವಾಸ್ತೆ ಛೇರ್ಮನ್ ಇದ್ದಂತಾಗುವುದು. ಈ ಸಂದರ್ಭದಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುವುದು. ಭಾರತ ಎಲೆಕ್ಟ್ರಾನಿಕ್ಸ್ ಮ್ಯಾನೇಜಿಂಗ್ ಡೈರೆಕ್ಟರೊಬ್ಬರಿದ್ದರು, ಛೇರ್ಮನ್ ಆಡಳಿತ ಪಕ್ಷದ ಭಾರಿ ವ್ಯಕ್ತಿ ಒಬ್ಬರಿದ್ದರು. ಅವರು ಎಂ. ಪಿ. ಸಹ ಆಗಿದ್ದರು. ಮ್ಯಾನೇಜಿಂಗ್ ಡೈರೆಕ್ಟರೇ ಎಲ್ಲಾ ಅಧಿಕಾರವನ್ನೂ ಚಲಾಯಿಸುತ್ತಿದ್ದರು. ಛೇರ್ಮನ್ನರಿಗೆ ಅಧಿಕಾರವಿರಲಿಲ್ಲ, ಅವರು ಕೇಳಿದರೆ ಕಾರು ಕೂಡ ಒಂದು ದಿವಸ ಕೊಡಲಿಲ್ಲ. ಫೋನ್ ಮಾಡಿದಾಗ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆಗ ಪ್ರೈವೇಟ್ ಟ್ಯಾಕ್ಸಿ ತೆಗೆದುಕೊಂಡು ಛೇರ್ಮನ್ ಹೋದರು. ಕಂಟೋನ್‌ಮೆಂಟಿನಲ್ಲಿ ಅವರಿಗೆ ರೂಂ ಕೊಟ್ಟಿದ್ದರು.

ಶ್ರೀ ಕೆ. ಎಚ್. ರಂಗನಾಥ್ :—ಅವರಿಗೆ ಮನೆ, ಅಲೋಯನ್ಸ್ ಎಲ್ಲಾ ಇದೆ.

ಶ್ರೀ ಎಂ. ಎಸ್. ಕೃಷ್ಣನ್ :—ಅಧಿಕಾರ ಒಂದು ಚೂರೂ ಇಲ್ಲ, ಅಧಿಕಾರ ಛೇರ್ಮನ್ನರಿಗೆ ಕೊಡಬಹುದಾಗಿತ್ತು.

ಶ್ರೀ ಕೆ. ಎಚ್. ರಂಗನಾಥ್ :—೭೦ ಬಿ (೨) ನೋಡಿ.

SRI M. S. KRISHNAN:—Section 70 B(2) says :

"The Housing Commissioner shall comply with every requisition without unreasonable delay."

Section 79 B(1) says :

"The Board require the Housing Commissioner to furnish it with—

(*a*) any return, statement estimate, statistics or other information regarding any matter pertaining to the administration of this Act."

The Board has right to call for a report on such matters from the Housing Commissioner.

Sri K. H. RANGANATH :—So, it has got all powers.

Sri M. S. KRISHNAN :—Yes The Chairman has been reduced to non entiry.

Sri K. H. RANGANATH:—The Chairman is part and parcel of the Board. On behalf of the board, he will exercise those powers.

Sri M. S. KRISHANAN:—There is no necessity for the Chairman. ಮರ್ಯಾದಸ್ತ ಜನ ಈ ಪರಿಸ್ಥಿತಿಗೆ ಬರುವುದಕ್ಕೆ ಇಷ್ಟಪಡುವುದಿಲ್ಲ. ಈ ಪರಿಸ್ಥಿತಿಗೆ ತೆಗೆದುಕೊಂಡು ಬರುತ್ತೀರಿ ಎನ್ನುವ ಅನುಮಾನ ಇದೆ. ಅದನ್ನು ಸಮನ್ವಯಗೊಳಿಸಬೇಕು. ಇದು ಏನು ಅಧಿಕಾರ ಚೇರ್ಮನ್‌ಗೆ ಇರಬೇಕು, ಏನು ಅಧಿಕಾರ ಕಮೀಷನರಿಗೆ ಇರಬೇಕು ಎಂದು ಯೋಚನೆ ಮಾಡದೆ ಆತುರಾತುರವಾಗಿ ತಂದಿರುವ ಮಸೂದೆಯೆಂದು ನನಗೆ ಅನ್ನಿಸುತ್ತದೆ. ಆಳವಾಗಿ ಯೋಚನೆ ಮಾಡಿದರೆ, ಇದರಲ್ಲಿ ತಿದ್ದುಪಡಿಗಳನ್ನು ತಂದು ಸರಿಯಾಗಿ ಕಂಟ್ರೋಲ್ ಇಟ್ಟುಕೊಂಡು ಸಮನ್ವಯಗೊಳಿಸುವುದು ಅವಶ್ಯಕವಿದೆ. ಆರೀತಿ ಮಾಡಲಿಲ್ಲ. ಎರಡನೆಯದು ಮಸೂದೆ ತೆಗೆದುಕೊಂಡು ಬರಬೇಕಾದರೆ, ನಾನು ತಿಳಿದುಕೊಂಡಿದ್ದೆ, ನಿಮ್ಮ ಗುರಿಗಳು ಏನಿವೆ, ಆ ಗುರಿಗಳನ್ನು ಸಾಧನೆ ಮಾಡುವ ಮಸೂದೆ ತರುತ್ತೀರಿ ಎಂದು ತಿಳಿದುಕೊಂಡಿದ್ದೆ. ಆ ಗುರಿಗಳು ಏನೆಂದರೆ ಶ್ರೀಮತಿ ಇಂದಿರಾ ಗಾಂಧಿಯವರು ಆಡಳಿತಕ್ಕೆ ಬಂದನಂತರ ಅವರ ಆಧೀನದಲ್ಲಿ ತಾವೆಲ್ಲ ಬಂದನಂತರ ಸರಕಾರ ಒಂದೊಂದು ರಾಜ್ಯದಲ್ಲೂ.........

ಶ್ರೀ ಕೆ. ಎಚ್. ರಂಗನಾಥ್ :—ಅದೆಲ್ಲ ಆಕ್ಟ್‌ನಲ್ಲಿ ನಮೂದು ಮಾಡುವುದಕ್ಕೆ ಆಗುತ್ತದೆಯೇ ? **Please refer Section 24 Sub-section (2)**

ಶ್ರೀ ಎಂ. ಎಸ್. ಕೃಷ್ಣನ್ :—**That is another aspect.** ಗುರಿ ಏನಿರಬೇಕು ಎಂದರೆ...

ಶ್ರೀ ಕೆ. ಎಚ್. ರಂಗನಾಥ್ :—ಆಕ್ಟ್‌ನಲ್ಲಿ ಅದೆಲ್ಲ ನಮೂದು ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :—ಸೆಕ್ಷನ್ ೨೪ ರ ಪ್ರಕಾರ ಸರಕಾರ ಯೋಜನೆಗಳಿಗೆ ಸ್ಯಾಂಕ್ಷನ್ ತೆಗೆದುಕೊಳ್ಳಬೇಕು ಎನ್ನುವುದು ಹೇಳಿದೆ. ಅದರ ಬಗ್ಗೆ ನನ್ನ ಕ್ರಿಟಿಸಿಸಂ ಇಲ್ಲ. ನಾನು ಬೇರೆ ವಿಷಯಕ್ಕೆ ಹೋಗುತ್ತಿದ್ದೇನೆ. ಹೌಸಿಂಗ್ ಬೋರ್ಡ್ ಬಗ್ಗೆ ಮೂಲಭೂತವಾದ ಗುರಿ ಏನು ಇದೆ, ಅದನ್ನು ಸಾಧನೆ ಮಾಡಿಲ್ಲ ಎಂದು ನನ್ನ ಟೀಕೆ ಇರುವುದು. ಎಷ್ಟು ದೂರ ಸಾಧನೆ ಮಾಡಬೇಕಾಗಿತ್ತೋ ಅಷ್ಟರವರೆಗೆ ಮಾಡಿಲ್ಲ. ೨–೩ ಮುಖ್ಯವಾದ ಗುರಿಗಳು ಹೌಸಿಂಗ್ ಬೋರ್ಡಿಗೆ ಇದೆ. ಮಧ್ಯಮವರ್ಗದವರಿಗೆ ಮನೆಗಳನ್ನು ಕಟ್ಟಿಸುವದಕ್ಕೆ ಒಂದು ವ್ಯವಸ್ಥೆ ಲೇಬರ್ ಹೌಸಿಂಗ್ ಸ್ಕೀಂ ಇವತ್ತು ಮಾಡಬೇಕು. ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು. ಅದೂ ಅಲ್ಲದೆ, ಮನೆಗಳನ್ನು ಕಟ್ಟಿಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಅವರಿಗೆ ಸಾಲ ಸೋಲಗಳನ್ನು ಕೊಡುವುದಕ್ಕೆ ಇದ್ದರೆ ಅದನ್ನು ಕೊಡಬೇಕು ಎಂದು ಎಲ್ಲಾ ಹಾಕಿಕೊಂಡಿದ್ದೀರಿ. ಅಷ್ಟೇ ಅಲ್ಲ ಅವರ ಗುರಿಗಳಲ್ಲಿ ಹಿಂದೆ ನಡೆದಂಥ ಡಿಬೆಟ್ಸ್ ಓದಿದಾಗ ಹೌಸಿಂಗ ಬಗ್ಗೆ ರೀಸರ್ಚ ಇನ್ ಹೌಸಿಂಗ್ ಸ್ಕೀಂ ವೇರಿಯಸ್ ಕಂಟ್ರೀಸ್ ಇನ್ ವೇರಿಯಸ್ ಪ್ಲೇಸ್ ಅದನ್ನು ನಮ್ಮ ರಾಜ್ಯದಲ್ಲಿ ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ಜಾರಿಗೆ ಕೊಡಬೇಕು ಎಂದು ಹೇಳುತ್ತೇನೆ. ಲೇಬರ್ ಹೌಸಿಂಗ್ ಸ್ಕೀಂ, ಈ ಇಂಡಸ್ಟ್ರಿಯಲ್ ಹೌಸ ಹಲವು ಕಟ್ಟಿದ್ದಾರೆ. ಯಶವಂತಪುರದ ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ೧೦೦೦–೧೫೦ ಮನೆಗಳನ್ನು ಕಟ್ಟಿಸಿದ್ದಾರೆ. ಅವನ್ನು ಪೋಲೀಸ್ ಕ್ವಾರ್ಟರ್ಸ್‌ಗೆ ಕೊಡಬೇಕು ಎಂದು ಯೋಚನೆ ಮಾಡಿದ್ದಾರೆ. ಅವರೂ ಲೇಬರ್ ಇರಬಹುದು. ಕಟ್ಟಿಸಿದ ಉದ್ದೇಶ ಲೇಬರ ಹೌಸಿಂಗ್, ಕೊಡಲಿಕ್ಕೆ ಇರುವುದು ಪೋಲಿಸರಿಗೆ. ನಾನು ಹೇಳುತ್ತೇನೆ, ಪೋಲೀಸರಿಗೆ ಬೇರೆ ಸ್ಕೀಂ ಇದೆ, ಪೋಲೀಸ್ ಕ್ವಾರ್ಟರ್ಸ್ ಕಟ್ಟಿಸಬೇಕು ಎಂದು ಅದಕ್ಕೆ ಬೇಕಾದಷ್ಟು ದುಡ್ಡು ಸ್ಯಾಂಕ್ಷನ್ ಮಾಡುತ್ತಾ ಇದ್ದೀರಿ. ಅವರಿಗೆ ಕಟ್ಟಿಸಿಕೊಡಬಾರದು ಎಂದು ಹೇಳುವುದಿಲ್ಲ. ಅವರಿಗೂ ಮನೆ ಬೇಕಾಗುತ್ತದೆ. ಯೋಜನೆಗಾಗಿ ಕಟ್ಟಿಸಿದ್ದೀರಿ. ಇಂಡಸ್ಟ್ರಿಯಲ್ ಹೌಸಿಂಗ್ ಅದನ್ನು ಬಿಟ್ಟು ಪೋಲೀಸ್ ಕ್ವಾರ್ಟರ್ಸ್ ಮಾಡಿದರೆ ಇಂಡಸ್ಟ್ರಿಯಲ್ ಹೌಸಿಂಗ್ ಆಗುವುದಿಲ್ಲ. ಆರೀತಿ ಮಾಡಕೊಡದು, ನನ್ನ ಆಗ್ರಹಪೂರ್ವಕವಾದ ವಿನಂತಿ. ಇನ್ನೊಂದು ಪ್ರಶ್ನೆ, ತಮಗೆ ಗೋತ್ತಿರಬಹುದು. ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ಕೇಂದ್ರ ಸರಕಾರ ಖಾಸಗೀ ಮಾಲೀಕರಿಗೆ ಮತ್ತು ಪಬ್ಲಿಕ್‌ಸೆಕ್ಟಾರ್ ಸಾರ್ವಜನಿಕ ಕ್ಷೇತ್ರಗಳಿಗೆ ಆದೇಶ ನೀಡಿ, ಸಬ್‌ಸಿಡೈಸ್ ಹೌಸಿಂಗ ಸ್ಕೀಂಗೆ ಶೇಕಡ ೮೫ ರಷ್ಟು ಸರಕಾರ ಸಬ್‌ಸಿಡಿ ಕೊಡುವುದಕ್ಕೆ ಒಪ್ಪಿಕೊಂಡಿದೆ. ದುರ

ದೃಷ್ಟವಶಾತ ಏನಾಗಿದೆಯೆಂದರೆ, ಕೇಂದ್ರ ಸರಕಾರದ ಕಾರ್ಖಾನೆಗಳಾದ ಎಚ್. ಎಂ. ಟಿ., ಎಚ್. ಎ. ಎಲ್., ಬಿ. ಇ. ಎಲ್. ಟಿ., ಮೂರನೇ ಒಂದು ಭಾಗ ೩೦ ಪರ್ಸೆಂಟ್ ಹಣ ಕೊಟ್ಟಿದ್ದಾರೆ. ೨೦-೨೨ ಪರ್ಸೆಂಟ್ ಮನೆಗಳನ್ನು ಕಟ್ಟಿಸಿದ್ದಾರೆ. ಬಿ. ಇ. ಎಲ್., ಎಚ್. ಎಂ. ಟಿ. ಏನೂ ಕಟ್ಟಿಸಿಲ್ಲ. ನಮ್ಮ ರಾಜ್ಯದ ಸರಕಾರಿ ಕ್ಷೇತ್ರ ಎನ್. ಜಿ. ಇ. ಎಫ್. ನಲ್ಲಿ ವಿಶಾಲವಾದ ಜಾಗ ಇದೆ, ಬೇಕಾದಷ್ಟು ಜಾಗ ಇದೆ. ಮನೆಗಳನ್ನು ಕಟ್ಟಿಸಿಕೊಡಿ ಎಂದರೆ ಆಗುವುದಿಲ್ಲ ಎಂದು ಹೇಳುತ್ತಾರೆ. ಆ ಪರಿಸ್ಥಿತಿ ಒಂದು ಫ್ಯಾಕ್ಟರಿಯಲ್ಲಿದೆ, ಅದೇರೀತಿ ಬೇರೆ ಸರಕಾರದ ಫ್ಯಾಕ್ಟರಿಗಳಲ್ಲೂ ಇದೆ. ಖಾಸಗಿ ಮಾಲಿಕರಿಗೆ ೮೫ ಪರ್ಸೆಂಟ್ ಕೊಡುತ್ತೀರಿ. ತೆಗೆದು ಕೊಳ್ಳದೆ ಮನೆಗಳನ್ನು ಕಟ್ಟಿಸುತ್ತಾ ಇಲ್ಲ. ಕಿರ್ಲೋಸ್ಕರ್ ಎಲೆಕ್ಟ್ರಿಕಲ್, ಜಿ. ಕೆ. ಡಬ್ಲ್ಯು. ಅವರಿಗೆ ಲೈಸನ್ಸ್ ಕೊಡುತ್ತೀರಿ, ಜಾಗ ಕೊಡುತ್ತೀರಿ, ಮನೆಗಳನ್ನು ಕಟ್ಟಿಸುವುದಕ್ಕೆ ಜಾಗ ತೆಗೆದುಕೊಳ್ಳುತ್ತಾರೆ. ಹೌಸಿಂಗ್ ಕಾಲೋನಿ ಮಾಡುತ್ತಾ ಇಲ್ಲ. ಬಿರ್ಲಾರವರು ಜಾಗ ಪಡೆದಿದ್ದಾರೆ. ಹೌಸಿಂಗ್ ಕಾಲೋನಿ ಎಂದು ಹೇಳಿ ಬರೀ ಜಾಗದ ಮಾಲೀಕರು ಪಡೆಯುತ್ತಾರೆ. ಸಬ್‌ಸಿಡೈಸ ಹೌಸಿಂಗ ಸ್ಕೀಂ ಹಣವನ್ನು ಪಡೆಯುವುದಿಲ್ಲ, ಲ್ಯಾಪ್ಸ ಆಗುತ್ತಾ ಇದೆ. ಇಂಥ ಪರಿಸ್ಥಿತಿ ದೇಶದಲ್ಲಿದೆ, ನಮ್ಮ ರಾಜ್ಯದಲ್ಲಿದೆ. ಹೌಸಿಂಗ್ ಬೋರ್ಡ್ ಆಕ್ಟ್‌ನಲ್ಲಿ ಏನು ಇದೆ. ಅದರಲ್ಲಿ ಯಾವರೀತಿ ಮಾಡಬೇಕು ಎಂದು ಇದೆ, ಅದರ ಬಗ್ಗೆ ಕಾನೂನು ತಜ್ಞರನ್ನು ಕೇಳಬೇಕು. ಮಾಲೀಕರು ಕಟ್ಟಿಸಿಕೊಡಬೇಕು. ಅವರು ಕಟ್ಟಿಸಿಕೊಡದೇ ಇದ್ದರೆ, ಕೇಂದ್ರ ಸರಕಾರದವರು ಒದಗಿಸುವ ಹಣ ನಮಗೆ ಕೊಡಲಿ, ಅದನ್ನು ಉಪಯೋಗ ಮಾಡಿ ನಾವು ಕಟ್ಟಿಸುತ್ತೇವೆ. ಅವರು ಕಟ್ಟಿಸಿದರೆ ಸಂತೋಷ, ಕಟ್ಟಿಸದೇ ಹೋದರೆ, ನಾವು ಕಟ್ಟಿಸಿ ಅವನಿಗೆ ಚಾರ್ಜ್ ಮಾಡಬೇಕು. ಹಾಗೆ ಮಾಡಿದರೆ ಆ ಬೃಹತ್ ಯೋಜನೆ ಏನು ಇಟ್ಟುಕೊಂಡಿದ್ದೀರಿ, ಅದನ್ನು ಕಾರ್ಯಗತ ಮಾಡುವುದಕ್ಕೆ ಆಗುತ್ತದೆ. ಕಾರ್ಮಿಕರಿಗೆ, ಮಧ್ಯಮವರ್ಗದವರಿಗೆ ಮನೆಗಳನ್ನು ಪೂರೈಸಬೇಕು ಎಂದು ಏನು ಗುರಿ ಇಟ್ಟುಕೊಂಡಿದ್ದೀರಿ, ಅದು ಸಫಲವಾಗುತ್ತದೆ ಎಂದು ಹೇಳಬಲ್ಲೆ. ಆ ದೃಷ್ಟಿಯನ್ನು ಇಟ್ಟುಕೊಂಡಿಲ್ಲ. ಇಟ್ಟುಕೊಂಡಿದ್ದರೆ, ಅದು ಮಸೂದೆಯಲ್ಲಿ ರಿಫ್ಲೆಕ್ಟ್ ಆಗಬೇಕು. ಆಗಿಲ್ಲ. ಆದುದರಿಂದ ಇದು ತಾವು ಯೋಚನೆ ಮಾಡಿ ತಂದಂಥ ಮಸೂದೆಯಲ್ಲ ಎಂದು ಹೇಳುತ್ತಿರುವುದು. ಮೂರನೆಯ ಅಂಶ ನೀವು ಕಟ್ಟಿಸುತ್ತಾ ಇರುವ ಮನೆಗಳು ಏನಾಗಿವೆ ? ಅದರಲ್ಲಿ ಬಹಳ ಅನ್ಯಾಯವಾಗಿದೆ, ತೀರಾ ಅನ್ಯಾಯ ವಾಗಿದೆ, ಸಿಮೆಂಟ್ ಮೌಲ್ಡಿಂಗ್ ಹಾಕಿರುತ್ತಾರೆ. ಸ್ವಲ್ಪ ದಿವಸ ಆದ ಮೇಲೆ ರೂಫ್‌ನಿಂದ ನೀರು ಜಿನಗುತ್ತದೆ, ಮಹಾಲಕ್ಷ್ಮಿ ಲೇ ಔಟ್ ನನ್ನ ಕ್ಷೇತ್ರದಲ್ಲಿದೆ. ಹೌಸಿಂಗ್ ಬೋರ್ಡಿನವರು ಅಲ್ಲಿ ಮನೆಗಳನ್ನು ಕಟ್ಟಿಸಿದ್ದಾರೆ ? ಗಾಳಿ ಬಂದು ಮನೆಗಳ ಮೇಲೆ ಹಾಕಿದ್ದ ಅಸ್‌ಬೆಸ್ಟಾಸ್ ಶೀಟುಗಳನ್ನು ಎಲ್ಲಾ ಹೊಡೆದು ಕೊಂಡು ಹೋಯಿತು.

Mr. DEPUTY SPEAKER :—Asbestos sheet is a small thing. Wind has terrific force, even men are picked up.

Sri M. S. KRISHNAN :—Wind is stronger than the asbestos sheet and the Contractor seems to be stronger than both the asbestos sheet and wind. Housing Board has given enough money. This was brought to the notice of the Hon. Minister who came there at the time this happend. It was raised on the floor of the House. Till to-day the repairs have not been conducted properly in this place.

(Mr. Deputy Speaker in the chair)

Sri K. H. RANGANATH.—Therefore, there is a necessity for an Amendment.

Sri M. S. KRISHNAN :—Not of this type but of a different type. This only says that Government sanction has to be obtained Is the Government going to see which is the Contractor involved, whether asbestos roofing or some other roofing has been put etc., I am afraid that the Government won't see and the Housing Commissioner is an Officer of the Government and he is supposed

to look into it. Just because the whole thing is sanctioned by the Government, it cannot be said that the Government is going to look into it very carefully whether it is cement roofing or asbestos roofing; on the other hand, it will dealy matters and it will lead to favouritism at higher levels and at lower levels. Now, it is at a particular level and it goes to the higher levels also. At present, contractors are approaching the Chairman or the Housing Commissioner and after this Bill is passed, they have to approach the Minister. If he is a good Minister, he may not take money. The Ministers are changing once in six months. We do not know whether Sri Ranganath is a Housing Minister or Sri Channabasappa will become the Housing Minister, under those circumstances.

Mr. DEPUTY SPEAKEK :—Ministers can never be bad Minisiters as the King can do no wrong.

Sri M. S. KRISHNAN :—Ministers can do no wrong.

Mr. Deputy SPEAKER :—Please speak on the amendments.

Sri T. R. SHAMANNA :—The thing is such amendments which will be of help to people and not cause several difficulties should be brought before the House.

Mr. DEPUTY SPEAKER :—I have followed the provisions and I have also followed the speech of the Hon. Member, Sri Krishan.

Sri M. S. KRISHNAN :—With great respect to the Chair, I would like to submit that, it is not my intention to go beyond the purview of the Bill. Amendments will come afterwards.

Mr. Deputy SPEAKER :—Not your amendments, but the amendments which are brought by the Government. Please note the scope.

Sri M. S. KRISHNAN :—In fact, I am just going through the Bill. The Hon. Member Sri Shamanna has dissected to such an extent that there is nothing left for me dissect. ಈ ಬಿಲ್ಲಿನಲ್ಲಿ ಏನೇನು ನ್ಯೂನತೆಗಳು ಇವೆ. ಎನ್ನುವುದನ್ನು ಬೇರೆ ಮಾನ್ಯ ಸದಸ್ಯರು ಹೇಳಿದ್ದಾರೆ. ಲೋ ಇನಕಂ ಗ್ರೂಪ್, ಮಿಡಲ್ ಇನಕಂ ಗ್ರೂಪ್‌ಗೆ ಕ್ಯಾಷ್ ಲೋನ್ಸ್ ಕೊಡಬೇಕು ಎಂದು ಹಿಂದೆ ಇತ್ತು. ಬಸವಲಿಂಗಪ್ಪನವರು ಬಂದಮೇಲೆ ಅದನ್ನು ಬದಲಾವಣೆ ಮಾಡಿದರು. ಸಿ. ಐ. ಟಿ. ಬಿ. ಯಲ್ಲಿ ಸೈಟು ಕೊಂಡು ಕೊಂಡು ಮನೆಗಳನ್ನು ಕಟ್ಟಿಸಿ ಕೊಡುತ್ತೇವೆ. ಕಂತುಗಳಲ್ಲಿ ಹಣವನ್ನು ತೀರಿಸಲಿ ಎನ್ನುವ ಉದ್ದೇಶದಿಂದ ಆ ರೀತಿ ಬದಲಾವಣೆ ಮಾಡಿದರು. ಒಂದು ದೃಷ್ಟಿಯಿಂದ ಅದು ಒಳ್ಳೆಯದು ಏಕೆಂದರೆ ಹಣ ಲಾಕಪ್ ಆಗುವುದಿಲ್ಲ. ಲೋನ್ಸ್ ಕೊಟ್ಟರೆ ಹಣ ಉಳಿದು ಹೋಗುತ್ತದೆ, ತೊಂದರೆ ಬರುತ್ತದೆ, ಹೌಸಿಂಗ್ ಬೋರ್ಡಿಗೆ ದುಡ್ಡು ಬೇಕಾಗುತ್ತದೆ ಎಂಬ ದೃಷ್ಟಿಯಿಂದ ಮಾಡಿರಬಹುದು. ಅದರಲ್ಲಿ ಸ್ವಲ್ಪ ಮಟ್ಟಿಗೆ ನ್ಯಾಯ ಇದೆ. ಅದು ಒಂದು ಮುಖ. ಇನ್ನೊಂದು ಮುಖ ಏನು ಎಂದರೆ ಲೋನ್ ಕೊಡದೆ ಅವರೇ ಕಟ್ಟಿಸುತ್ತಾರೆ ಎಂದರೆ ಯಾವರೀತಿ ಕಟ್ಟಿಸುತ್ತಾರೆ ? ಯಾವ ಡಿಸೈನ್ ಕಟ್ಟಿಸುತ್ತಾರೆ ? ಅವರ ಕಂಟ್ರಾಕ್ಟರ ಮೂಲಕ ಕಟ್ಟಿಸುವುದಕ್ಕೆ ಸಾಧ್ಯ ಇದೆಯೇ ? ಇದರಲ್ಲಿ ಅನುಮಾನ ಬರುತ್ತದೆ, ಇವರು ಕಟ್ಟಿಸಿರುವ ಮನೆ ಸೋರುವ ಮನೆ, ಕ್ರಾಕ್ ಬಂದಿರುವ ಮನೆಗಳು. ಬೇರೆಯವರು ಮನೆ ಕಟ್ಟಿಸದೇ ಅವರೇ ಕಟ್ಟಬೇಕು ಎಂದರೆ ನಿಮ್ಮ ಗುರಿ ಸಾಧನೆಯಾಗುವುದಿಲ್ಲ, ತೊಂದರೆಯಾಗುತ್ತದೆ. ಬರುವ ಹಣ ಮೋರಿಯಲ್ಲಿ

ಹಾಕಿದಂತಾಗುತ್ತದೆ. ಆದ್ದರಿಂದ ನನ್ನ ಅಭಿಪ್ರಾಯ ಏನು ಎಂದರೆ ಹೌಸಿಂಗ್ ಬೋರ್ಡಿನವರು ಲೋನ್ ಏನು ಕೊಡುತ್ತಾರೆ ಎಂಧು ಸ್ಕೀಮು ಇತ್ತು ಅದು ಇರಬೇಕು, ಅದನ್ನು ಪೂರ್ತಿ ಕಿತ್ತು ಹಾಕುವುದು ಸರಿಯಾದುದು ಅಲ್ಲ, ಜೊತೆಯಲ್ಲಿ ಹೌಸಿಂಗ್ ಸ್ಕೀಂ ಬಸವಲಿಂಗಪ್ಪನವರು ತೆಗೆದುಕೊಂಡು ಬಂದರು, ಅದನ್ನು ಯೋಚನೆ ಮಾಡಿ ಆದಷ್ಟು ಮಟ್ಟಿಗೆ ಅವರವರೇ ಮನೆ ಕಟ್ಟುವುದಕ್ಕೆ ಅವಕಾಶ ಇರುವ ಪದ್ಧತಿ ಇರಬೇಕು ಈ ಎರಡನ್ನೂ ಸಮನ್ವಯಗೊಳಿಸಬೇಕು. ಯಾರು ಯಾರು ನೂರಾರು ಅಪ್ಲಿಕೇಷನ್ ಹಾಕಿಕೊಂಡಿದ್ದಾರೆ, ಅವರಿಗೆ ಅವಕಾಶ ಕೂಡದೆ, ನೂರಾರು ಜನರಿಗೆ ತೊಂದರೆ ಮಾಡಿದ್ದಾರೆ. ಬೆಂಗಳೂರು ನಗರದಲ್ಲಿ ಮಾತ್ರ ಅಲ್ಲ ರಾಜ್ಯಾದ್ಯಂತ ಇಂತಹ ಪರಿಸ್ಥಿತಿ ಇದೆ, ಎಂದು ಕಾಣುತ್ತದೆ. ಇದನ್ನು ತಪ್ಪಿಸುವುದಕ್ಕೆ ಮೊದಲು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಸೂಚಿಸಬಯಸುತ್ತೇನೆ.

ಇನ್ನು ೧೨ ಜನ ಇದ್ದುದು ೧೫ ಜನ ಮಾಡಿರುವ ಬಗ್ಗೆ ನನ್ನ ಮಿತ್ರರು ಇಲ್ಲಿ ಮಾತನಾಡಿದ್ದಾರೆ ನನ್ನ ಅಭಿಪ್ರಾಯ ಸಹ ೧೨ ಜನ ಇದ್ದರೆ ಅನುಕೂಲ, ೧೫ ಜನ ಇದ್ದರೆ ಅನಾನುಕೂಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ೩ ಜನ ಜಾಸ್ತಿ ಮಾಡಿದರೆ ಅನಾನುಕೂಲವಾಗುತ್ತದೆ ಎಂದು ಅಲ್ಲ. ರೆಪ್ರೆಸೆನ್‌ಟೇಷನ್ ಯಾವರೀತಿ ಕೊಡುತ್ತಾರೆ ಎನ್ನುವ ಬಗ್ಗೆ ನನ್ನ ಟೀಕೆ ಇರುವುದು. ಇಲ್ಲಿ ಲೇಬರ್ ಹೌಸಿಂಗ್ ಮತ್ತು ಇಂಡಸ್ಟ್ರಿಯಲ್ ಹೌಸಿಂಗ್ ಮತ್ತು ಮಿಡಲ್ ಕ್ಲಾಸ್ ಹೌಸಿಂಗ್ ಸ್ಕೀಂ ಇರುವುದರಿಂದ, ಇದಕ್ಕೆ ಕೆಲವು ವರ್ಗದ ಪ್ರತಿನಿಧಿಗಳು ಬೋರ್ಡಿನಲ್ಲಿ ಇರುವಂತೆ ಮಾಡಿಕೊಡಬೇಕು ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ.

ನನ್ನ ಅಭಿಪ್ರಾಯದಲ್ಲಿ ಬೋರ್ಡ್‌ನಲ್ಲಿ ಅವರಿಗೆ ಅವಕಾಶ ಮಾಡಿಕೊಡಬೇಕು. ಸ್ಪೆಸಿಫಿಕ್ ಆಗಿ ಹೇಳಬೇಕು ಎಂದರೆ ಶೆಡ್ಯೂಲ್‌ಕ್ಯಾಸ್ಟ್ ಶೆಡ್ಯೂಲ್ ಟ್ರೈಬ್ಸ್‌ನ ಪ್ರತಿನಿಧಿ ಆ ಬೋರ್ಡಿನಲ್ಲಿರಬೇಕು. ಎರಡನೆಯದು ವರ್ಕಿಂಗ್‌ಕ್ಲಾಸ್ ರೆಪ್ರಜೆಂಟಿಟೀವ್ಸ್ ಇರಬೇಕು. ಒಬ್ಬರನ್ನೇ ಹಾಕಿದ್ದಾರೆ, ಅವರು ಯಾರು ಎಂದರೆ ಡಿ. ವೆಂಕಟೇಶ್ ಎಂಬುವವರು ನಮ್ಮ ಸ್ನೇಹಿತರೇ, ಐ. ಎನ್. ಟಿ. ಯು. ಸಿ. ಯವರು ಅನೇಕ ವರ್ಷಗಳಿಂದ ಆ ಬೋರ್ಡಿನಲ್ಲಿದ್ದಾರೆ, ಆ ಬೋರ್ಡ್ ಹುಟ್ಟಿದ ಮೊದಲಿನಿಂದಲೂ ಒಬ್ಬರೇ ಇರುವುದು. ರಾಜಕಾರಣಗಳಿಂದ ಅವರನ್ನೇ ಹಾಕಿದ್ದಾರೆ. ಇದು ಸಾಲದು ಕಾರ್ಮಿಕ ವರ್ಗದ ಪ್ರತಿನಿಧಿ ಎಂದು ಹೇಳಿ ಸ್ಪೆಸಿಫಿಕ್ ಆಗಿ ಹಾಕಿ. ೨ ರೆಪ್ರಜೆಂಟೇಷನ್ನಾದರೂ ಕೊಡಬೇಕೆಂದು ನನ್ನ ಅಭಿಪ್ರಾಯ. ಆಗ ಹೋಗಿ ನೋಡುವುದಕ್ಕೆ ಆಗುತ್ತದೆ. ಹೆಚ್ಚು ಆಸಕ್ತಿ ವಹಿಸುವುದಕ್ಕೆ ಆಗುತ್ತದೆ. ಐ. ಎನ್. ಟಿ. ಯು.ಸಿ ಎ. ಬಿ. ಟಿ. ಯು. ಸಿ ಇಬ್ಬರು ಕಾರ್ಮಿಕರ ಪ್ರತಿನಿಧಿಗಳು ಇರಬೇಕೆಂದು ನನ್ನ ಅಭಿಪ್ರಾಯ. ತಾಂತ್ರಿಕ ತಜ್ಞರು ಮುಖ್ಯವಾಗಿ ಹೌಸಿಂಗ್ ಬೋರ್ಡಿನಲ್ಲು ವಿಷಯವನ್ನು ತಿಳಿದುಕೊಂಡಂಥ ಜನ ಮತ್ತೆ ಎಂಜಿನಿಯರ್ಸ್ ಅಂಥವರನ್ನು ನೋಡಿ ಅವರಲ್ಲಿ ಸೇರಿಸಬೇಕು. ಇದು ಸ್ಪೆಸಿಫಿಕ್ ಆಗಿ ಅವರನ್ನು ಮೆನ್‌ಷನ್ ಮಾಡದೇ ಇರುವುದು ಒಂದು ನ್ಯೂನ್ಯತೆ ಕಂಡು ಬರುತ್ತಿದೆ. ಮೆನ್‌ಷನ್ ಮಾಡದೇ ಇದ್ದರೆ ಈಗ ಕೊಟ್ಟಿರುವ ಸೂಚನೆಯನ್ನು ತೆಗೆದುಕೊಳ್ಳಬಹುದು, ಮಂತ್ರಿಗಳು ಉತ್ತರ ಕೊಡುವಾಗ "ಗಮನದಲ್ಲಿಟ್ಟುಕೊಂಡು ಮಾಡುತ್ತೇವೆ" ಎಂದು ಹೇಳುತ್ತಾರೆ ಅದು ಗೊತ್ತು. ಆದರೆ ಅದು ಏನು ಆಗಬಹುದು ಎಂಬ ಅನುಮಾನವಿದೆ. ಎಷ್ಟೇ ಗಮನದಲ್ಲಿಟ್ಟುಕೊಂಡರೂ ಸಹ ಅಂಥಂಥ ವರ್ಗಗಳಿಗೆ ನಿರ್ದಿಷ್ಟವಾಗಿ ಕೊಡುತ್ತೀರಿ. ಏನೇ ಪ್ರಜರ್ ಬಂದರು ಆ ವರ್ಗಗಳಿಗೆ ಕೊಡಬೇಕಾಗಿ ಬರುತ್ತದೆ. ಅದು ಬಿಟ್ಟರೆ ಇವತ್ತಿನ ದಿವಸ ಪ್ರೆಜರ್ಸ್ ಅಂಡ್ ಪುಲ್ಸ್ ಬಂದು ತಮಗೆ ಇಷ್ಟಬಂದವರಿಗೆ ಎಂ. ಎಲ್. ಎ. ಗೆ ಜಾಗ ಕೊಡಲಿಲ್ಲ ಅಂಥವರಿಗೆ ಸ್ಥಾನ ಕೊಡುತ್ತೀರಿ, ಇಲ್ಲ ಯಾರು ಎಂ. ಎಲ್. ಸಿ. ಸದಸ್ಯರು ಇಲ್ಲ ಮಂತ್ರಿ ಆಗಿದ್ದವರನ್ನು ಕಿತ್ತು ಹಾಕಿದಿರಿ ಅಂಥವರಿಗೆ ಸ್ಥಾನ ಕೊಡಬೇಕಾಗಿ ಬರುತ್ತದೆ, ಆಗ ಅಂಥವರಿಗೆ ಸ್ಥಾನ ಕೊಡುತ್ತೀರಿ. ಅದು ಬರುತ್ತದೆ ಅದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಡಿ. ಸರಿಯಾದುದು ಅಲ್ಲ, ನ್ಯಾಯವಾದುದು ಅಲ್ಲ ಪ್ರಜಾಪ್ರಭುತ್ವದ ತತ್ವಕ್ಕೆ ಸಮತಾವಾದ ತತ್ವಕ್ಕೆ ಹೊಂದಾಣಿಕೆಯಾಗಿರುವುದಿಲ್ಲ, ದಯವಿಟ್ಟು ಅಂಥದ್ದನ್ನು ಮಾಡಬೇಡಿ ಎಂದು ಹೇಳುತ್ತೇನೆ. ಈಗಲಾದರೂ ಯೋಚನೆ ಮಾಡಿ ತಿದ್ದುಪಡಿ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಅಂಶ ಏನೆಂದರೆ, "The Chairman and every other member shall hold office during the pleasure of the State Government." ಎಂದರೆ ಏನು ಎಂಬುದು ಗೊತ್ತಾಗುವುದಿಲ್ಲ. ಯಾವಾಗ ಬೇಕಾದರೂ ತೆಗೆದುಹಾಕಬಹುದು. ಬೇಕಾದರೆ ಇಟ್ಟುಕೊಳ್ಳಬಹುದು. ಖುಷಿ ಬಂದಹಾಗೆ ಮಾಡಬಹುದು. ಸರ್ಕಾರದ ಖುಶಿ ಬಂದಹಾಗೆ ಸರ್ಕಾರ ಎಂದರೆ ಮಂತ್ರಿ, ಮಂತ್ರಿಗೆ ಖುಶಿ ಬಂದಹಾಗೆ ಬೋರ್ಡ್ ಮಾಡಬಹುದು. ಮಂತ್ರಿಯವರು ಹೇಳಿದಂತೆ ಹೌಸಿಂಗ್ ಕಮೀಷನರ್ ಕೇಳಬೇಕಾಗುತ್ತದೆ. ಚೇರ್ಮನ್ ಇರುವುದು ನಾಮಕಾವಸ್ಥೆ ಆಗುತ್ತದೆ.

ಮಂತ್ರಿಗಳಿಗೆ ಖುಷಿಬಂದ ಹಾಗೆ ನಡೆಯುತ್ತದೆ. "The Chairman and every other member shall hold office during the pleasure of the State"/ಎಂದು ಹೇಳುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವದ ಪ್ರಶ್ನೆ Even administratively it is not correct. ಎಂದು ಅನ್ನಿಸುತ್ತದೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ, ಈ ಬಗ್ಗೆ ದೊಡ್ಡ ಚರ್ಚೆ ನಡೆಯುತ್ತಾ ಇದೆ. ಪಬ್ಲಿಕ್ ಸೆಕ್ಟಾರ್ ಕೈಗಾರಿಕೆಗಳಲ್ಲಿ ಮ್ಯಾನೆಜಿಂಗ್ ಡೈರೆಕ್ಟರ್, ಚೇರ್ಮನ್ ಅಥವಾ ಬೇರೆ ಅಧಿಕಾರಿಗಳು ಯಾರನ್ನೇ ನೇಮಕ ಮಾಡಿದರೂ ಸಹ ಕ್ಲುಪ್ತ ಕಾಲಕ್ಕೆ ಮಾಡಬೇಕೆ, ಬೇಡವೇ ಎಂಬ ಪ್ರಶ್ನೆ ಎ. ಆರ್. ಸಿ. ಯಲ್ಲಿ ಬಂದು ಅಲ್ಲಿಯೂ ಚರ್ಚೆ ನಡೆಸಿದಾಗ, ಮಾಜಿ ರೈಲ್ವೆ ಮಂತ್ರಿಗಳಾಗಿದ್ದ ಹನುಮಂತಯ್ಯನವರು ಅದರ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಕೇಂದ್ರದವರು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಜಸ್ ಎಂದು ಏನು ಸ್ಥಾಪನೆ ಮಾಡಿದ್ದಾರೆ ಅದರ ವಿಶ್ಲೇಷಣೆ ಮಾಡಿ ಉತ್ತರ ಕೊಟ್ಟಿದ್ದಾರೆ. ಇಲ್ಲಿ ನಾನು ಹೇಳುವುದು ಒಂದೇ ಒಂದು ಏನೆಂದರೆ ಜವಾಬ್ದಾರಿಯನ್ನು ಇಂಥವರಿಗೆ ವಹಿಸಿ ಎಂದು ಸ್ಪಷ್ಟವಾಗಿ ಹೇಳಬೇಕು. ಎರಡನೆಯದು ಮಾನೇಂಜಿಗ್ ಡೈರೆಕ್ಟರ್ ಆಗಲಿ, ಚೇರ್ಮನ್ ಆಗಲಿ, ಯಾರೇ ಆಗಲಿ, ಎಷ್ಟು ದಿವಸ ಇರುತ್ತಾರೆಂಬುದನ್ನು ಸ್ಪಷ್ಟವಾಗಿ ಹೇಳಿ, ಎಷ್ಟು ವರ್ಷಗಳವರೆಗೆ ಕಂಟ್ರ್ಯಾಕ್ಟ್ ಕೊಡುತ್ತೀರಿ, ಎಷ್ಟು ದಿವಸಗಳವರೆಗೆ ಕೆಲಸ ಮಾಡಬೇಕಾಗಿ ಬರುತ್ತದೆ, ಅವರು ಸಂಸ್ಥೆಯನ್ನು ಹೇಗೆ ಮುಂದೆ ತರಬೇಕು, ತರದೇಹೋದರೆ ಸ್ಯಾಕ್ ಮಾಡಬೇಕಾಗಿ ಬರುತ್ತದೆ ಎಂದು ಹೇಳಿರುವುದು ಮಾತ್ರವಲ್ಲ ಮಾಡಲೇಬೇಕೆಂದು ಶಿಫಾರಸು ಬಂದಿದೆ. ಇಲ್ಲಿ ಇರುವುದು at the pleasure of the Govt. ಎಂದು ಇದರಲ್ಲಿ ಅಡಕವಾಗಿದೆ. ಚೇರ್ಮನ್ ಸರಿಯಾಗಿ ಇಲ್ಲ ಎಂದು ಕಂಡರೆ ಅವರನ್ನು ಕಿತ್ತು ಹಾಕಬಹುದು. ಇದು ಸರಿಯಲ್ಲ ಅವರಿಗೆ ೩–೪ ವರ್ಷಗಳ ವರೆಗೆ ಟೈಮ್ ಕೊಡಬೇಕು, ಅಷ್ಟು ವರ್ಷದೊಳಗೆ ನಿಯೋಜಿತ ಯೋಜನೆ ಅವರು ಕಾರ್ಯಗತ ಮಾಡಬೇಕು, ಕಾರ್ಯಗತ ಮಾಡದೇ ಹೋದರೆ ಕಿತ್ತು ಹಾಕುವಂಥ ಅಧಿಕಾರ ಇಟ್ಟುಕೊಳ್ಳಬೇಕು. At the pleasure of the Government ಎಂದರೆ ನೀವು ಅಧಿಕಾರವನ್ನು ದುರುಪಯೋಗ ಮಾಡಿಕೊಂಡು, ಇದರಿಂದ ಸಂಸ್ಥೆ ಮುಂದೆ ಬಾರದೇ ಇರುವುದಕ್ಕೆ ಅವಕಾಶವಾಗುತ್ತದೆ. ಎಂದರೆ ಯಾರಿಗಾದರೂ ಲಂಚ ಹೊಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ. ಇದು ತಿದ್ದುಪಡಿಯಾಗ ಬೇಕಾಗಿದೆಂದು ಹೇಳಿ ಇದನ್ನು ನಾನು ಪ್ರತಿಭಟಿಸಿ ವಿರೋಧಿಸುತ್ತೇನೆ. ಬೇರೆ ವಿಷಯಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಂದೇ ಒಂದು ವಿಷಯ ಹೇಳಿ ಮುಗಿಸುತ್ತೇನೆ. ಹೌಸಿಂಗ್‌ಬೋರ್ಡಿನ ವಿಷಯಕ್ಕೂ ಈ ಮನೆಯ ಸದಸ್ಯರಿಗೂ ಸಂಭಂದವಿದೆಯೇ ? ಅಲ್ಲಿನ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್ ಕೇಳುವುದಕ್ಕೆ ಈ ಸದನಕ್ಕೆ ಅಧಿಕಾರ ಇರಬೇಕೆಂದು ನನ್ನ ಅಭಿಪ್ರಾಯ. ನಿನ್ನೆ ಶಾಮಣ್ಣನವರು ಹೇಳಿದರು ವಾಟರ್ ಸಪ್ಲೈ ಬೋರ್ಡ್ ಅಕ್ಟಿನಲ್ಲಿ ಅಂತಹ ಒಂದು ಅವಕಾಶ ಇದೆ ಎಂದು ಅದೇ ರೀತಿ ಇದರ ಸ್ಟೇಟ್‌ಮೆಂಟ್ ಆಫ್ ಅಕೌಂಟ್ಸ್‌ನ್ನು ಸದನದ ಮುಂದೆ ಇಡಬೇಕು, ಇಲ್ಲ ಚರ್ಚೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿರಬೇಕು. ಈಗ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕುತ್ತಿಲ್ಲ, ಅದೇ ಕೊರತೆ ಆದುದರಿಂದ ಚರ್ಚೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲದೇ ಹೋದರೆ, ನ್ಯಾಯವಾದುದು ಅಲ್ಲ. ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳಿ ನಾನು ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು (ಶಾಂತಿನಗರ) :—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸಾರಿಗೆ ಮತ್ತು ಗೃಹಮಂತ್ರಿಗಳು ಈ ಕರ್ನಾಟಕ ಗೃಹಮಂಡಲಿ ತಿದ್ದುಪಡಿ ಮಸೂದೆಯನ್ನು ಏನು ತಂದಿದ್ದಾರೆ ಅದನ್ನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ವಿರೋಧ ಪಕ್ಷದವರು ಕೇಲವು ಟೀಕೆಗಳನ್ನು ಮಾಡಿದಂಥದ್ದನ್ನು ನಾನು ಕೇಳುತ್ತಾ ಇದ್ದೆ. ಅಧ್ಯಕ್ಷರೇ, ಈ ಅಮೆಂಡ್‌ಮೆಂಟನ್ನು ತರುವುದಕ್ಕೆ ಇದ್ದ ಮೂಲ ಉದ್ದೇಶವೇನು ? ನವೆಂಬರ್ ೩, ೧೯೭೩ ರಲ್ಲಿ ಸುಗ್ರೀವಾಜ್ಞೆ ಏತಕ್ಕೆ ತಂದರು, ಇದರ ಹಿನ್ನೆಲೆ ಏನು ಎಂಬುದರ ಬಗ್ಗೆ ವಿರೋಧ ಪಕ್ಷದವರು ಮಾತನಾಡಿದ ಕಾಲದಲ್ಲಿ ಸೂಕ್ಷ್ಮವಾಗಿ ಹೇಳಿದರು. ನನಗನ್ನಿಸುತ್ತದೆ ಯಾವ ಘನೋದ್ದೇಶದಿಂದ ಗೃಹ ಮಂಡಲಿ ಇದೆ, ಅದು ಸರಿಯಾಗಿ ಸಾರ್ವಜನಿಕರಿಗೆ ಉಪಯೋಗವಾಗಿಲ್ಲ ಎನುವುದು ನನ್ನ ಮುಖ್ಯವಾದ ಭಾವನೆ. ತಮಗೆ ಗೊತ್ತಿರಬಹುದು, ಗೃಹಮಂಡಲಿ ಬಂದಲಾಗಾಯ್ತು ಎಷ್ಟು ಕಾರ್ಯಕ್ರಮ ನಡೆದಿದೆ? ನಮ್ಮಲ್ಲಿ ಯೋಜನೆ ತಯಾರು ಮಾಡಲು ಜನರ ಕೊರತೆಯಿಲ್ಲ ಆದರೆ ಅದನ್ನು ಇಂಪ್ಲಿಮೆಂಟ್ ಮಾಡು ವುದರಲ್ಲಿ, ಹೆಚ್ಚು ಕೊರತೆ ಇದೆ. ಗೃಹಮಂಡಲಿ ಅಧ್ಯಕ್ಷರು ಇರುವ ಕಾಲದಲ್ಲಿ ಏನೇನು ನಡೆಯಿತು? ಕೋರ್ಟಿಗೆ ಹೋಗಿ ಹಾಕಿದ್ದ ಬೀಗಗಳನ್ನು ಒಡೆದು ಹಾಕಿರುವಂಥ ಸಂದರ್ಭ ನೋಡಿದರೆ, ಇದೇ ತರಹ ಕಾರ್ಯದರ್ಶಿಗಳು ನಡೆದಿದ್ದೇ ಆದರೆ, ಅಲ್ಲಿಯಾರು ಅವು ಉಳಿಯುವುದಕ್ಕೆ ಸಾಧ್ಯವಿಲ್ಲ,

ಆದರಿಂದ ಸಾರ್ವಜನಿಕರಿಗೆ ಬೇಕಾದಷ್ಟು ತೊಂದರೆಯಾಯಿತು. ಮಾನ್ಯ ವಿರೋಧ ಪಕ್ಷದ ಮಿತ್ರರು ಹೇಳಿದರು, ಕೆಲವು ಅಧಿಕಾರಿಗಳಿಂದ ಕೆಲ ಸಾರ್ವಜನಿಕರಿಗೆ ಹಣ ಸರಿಯಾಗಿ ಒದಗಲಿಲ್ಲವೆಂದು, ಇದನ್ನೆಲ್ಲಾ ಆಲೋಚನೆ ಮಾಡಿಕೊಂಡು ಸಾಧ್ಯವಾದಷ್ಟು ಮೊಟಗೋಲು ಹಾಕುವುದಕೋಸ್ಕರ ೩–೧೧–೧೯೭೩ ರಲ್ಲಿ ಸುಗ್ರೀವಾಜ್ಞೆ ಹೊರಡಿಸಿದ್ದು ಆಯಿತು. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದ್ದಹಾಗೆ ಈ ಮನೆ "ನ್ಯಾಶನಲ್ ಪ್ರಾಬ್ಲಮ್. ನಮಗೆ ಮುಖ್ಯವಾಗಿ ಬೇಕಾದದ್ದು ೫ ಅಂಶಗಳು ಮೊದಲು ಊಟ, ಬಟ್ಟೆ ವಸತಿ, ವಿದ್ಯಾಭ್ಯಾಸ ಮತ್ತು ಆರೋಗ್ಯ. ಈ ಮನೆ ಪ್ರಶ್ನೆ ನ್ಯಾಶನಲ್ ಪ್ರಾಬ್ಲಂ ಇದು ಒಂದೇ ದಿವಸಕ್ಕೆ ಮುಗಿಯುವ ಪ್ರಾಬ್ಲಂ ಅಲ್ಲ. ಅದಕೋಸ್ಕರ ಕೇಂದ್ರ ಸರ್ಕಾರದವರು ಮತ್ತು ಸಂಸ್ಥಾನ ಸರ್ಕಾರಧವರು ಬೇಕಾದಷ್ಟು ಸ್ಕೀಮ್‌ಗಳನ್ನು ಹಾಕಿಕೊಂಡಿದ್ದಾರೆ. ಕೋಟ್ಯಾಂತರ ರೂಪಾಯಿ ಕೊಟ್ಟಿದ್ದಾರೆ. ಆದರೆ ಕೆಲವು ಸಂದರ್ಭಗಳಲ್ಲಿ ನಮ್ಮ ದುರಾಡಳಿತದ ಪರಿಣಾಮವಾಗಿ ಅದು ಲ್ಯಾಪ್ಸ್ ಆಗಿದೆ. ಹಣವನ್ನು ಸಕಾಲದಲ್ಲಿ ಒದಗಿಸಲು ಆಗಲಿಲ್ಲ, ಕೆಲಸಂದರ್ಭದಲ್ಲಿ ತಲಪುವವರಿಗೆ ಸರಿಯಾಗಿ ತಲುಪಲಿಲ್ಲ, ಮನುಷ್ಯ ತನ್ನ ಜೀವಮಾನದಲ್ಲಿ ಮನೆಕಟ್ಟುವುದು ಒಂದೇಸಲ. ಅದಕ್ಕೆ ತಕ್ಕ ಅನುಕೂಲ ಒದಗಿಸುವುದು ಸರ್ಕಾರದ ಮತ್ತು ಸಾರ್ವಜನಿಕರ ಜವಾಬ್ದಾರಿ ಎಂಬುದನ್ನು ನಾವು ಮರೆಯಬಾರದು.

ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ನಾನು ಇದರ ಹಿನ್ನೆಲೆ ಕೊಟ್ಟು ಅಮೇಲೆ ಈ ಅಮೆಂಡ್‌ಮೆಂಟ್ ಮೇಲೆ ಮಾತನಾಡುವುದಕ್ಕೆ ಬರುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ಕೇಂದ್ರದಲ್ಲಿ ಹೌಸಿಂಗ್ ಮಿನಿಸ್ಟ್ರಿ ಇದೆ. ಈ ಬಗ್ಗೆ ಅವರಿಂದ ನಮ್ಮ ಸರಕಾರದವರು ಹೆಚ್ಚು ಹಣವನ್ನು ಹೊಂದಲಿಲ್ಲ ಎಂದು ನನಗೆ ಅನಿಸುತ್ತದೆ. ಉತ್ತರ ಪ್ರದೇಶದಲ್ಲಿ ಹೋದರೆ ನಮಗೆ ಕಾಣುತ್ತದೆ. ಕೇಂದ್ರದಿಂದ ಸಹಾಯ ಪಡೆದು ಅಲ್ಲಿ ಸಾವಿರಾರು ಮನೆಗಳನ್ನು ಕಟ್ಟಿದ್ದಾರೆ. ಅಲ್ಲಿ ಲೋಂಡಿ ಕಾಲೋನಿ, ವಿನಾಯ ನಗರ ರಾಮಕೃಷ್ಣಪುರ ಇನ್ನು ಇತರ ಕಾಲೋನಿಗಳನ್ನು ನೋಡಿದಾಗ ಕೇಂದ್ರ ಸರಕಾರದಿಂದ ಹಣ ಸಹಾಯ ಪಡೆದು ಕೋಟ್ಯಾಂತರ ರೂಪಾಯಿಗಳನ್ನು ಇನ್‌ವೆಸ್ಟ್ ಖರ್ಚು ಮಾಡಿ ೪-೪ ಅಂತಸ್ತಿನ ಮನೆ ಕಟ್ಟಿದ್ದಾರೆ. ಆದುದರಿಂದ ನಾನು ಕೇಳುತ್ತೇನೆ ಈ ರೀತಿಯಾಗಿ ನಮ್ಮ ದಕ್ಷಿಣ ದೇಶಕ್ಕೆ ಎಷ್ಟು ಹಣವನ್ನು ಕೇಂದ್ರದಿಂದ ಪಡೆದಿದ್ದೀರಿ ಎಂದು ? ಮದ್ರಾಸನಲ್ಲಿ ನೋಡಿದರೆ ಹೌಸಿಂಗ್ ಬೋರ್ಡ ಏನು ಕೆಲಸ ಮಾಡಿದೆ ಎನ್ನುವುದು ಬಹು ಚೆನ್ನಾಗಿ ನಮಗೆ ಗೊತ್ತಾಗುತ್ತದೆ. ಆದರೆ ನಮ್ಮ ಮೈಸೂರು ರಾಜ್ಯದಲ್ಲಿರುವ ಹೌಸಿಂಗ್ ಬೋರ್ಡ ರಾಜ್ಯದ ಜಿಲ್ಲಾ ಮಟ್ಟದಲ್ಲಾಗಲಿ, ತಾಲ್ಲೂಕು ಮಟ್ಟದಲ್ಲಾಗಲಿ, ಗ್ರಾಮ ಮಟ್ಟದಲ್ಲಾಗಲಿ ಈ ಕೆಲಸವನ್ನು ಮಾಡುವುದಕ್ಕೆ ಕೇಂದ್ರದಿಂದ ಎಷ್ಟು ಹಣವನ್ನು ತಂದಿದ್ದಾರೆ ಎನ್ನುವುದನ್ನು ನೋಡಿದಾಗ ಇಲ್ಲಿ ಆಗಿರುವ ದುರಾಡಳಿತ ಪರಿಣಾಮವಾಗಿ ಅಷ್ಟು ಹಣ ಕೇಂದ್ರದಿಂದ ತರಲಿಕ್ಕೆ ಆಗಲಿಲ್ಲ. ಕಾರಣ ಸರಕಾರಕ್ಕೂ ಮತ್ತು ಗೃಹಮಂಡಲಿಗೂ ಇರತಕ್ಕಂಥಾ ಜಗಳಗಳೆ ಕಾರಣ ಎಂದರೆ ತಪ್ಪಾಗಲಾರದು. ಅವರ ಮನೆ ಮತ್ತು ವ್ಯಕ್ತಿಯ ಜಗಳವನ್ನು ಸಾರ್ವಜನಿಕರಿಗೆ ಹಂಚಿಬಿಟ್ಟರು. ಅದಕ್ಕೋಸ್ಕರ ೩-೧೧-೭೩ ರಲ್ಲಿ ಒಂದು ಸುಗ್ರೀವಾಜ್ಞೆ ತರಬೇಕಾಯಿತು. ಅವರ ಮಾತಿನಲ್ಲಿ ಹೇಳುವುದಾದರೆ ಈಗ ಅಧ್ಯಕ್ಷರು ಹೊರಟುಹೋದದ್ದು ಆಯಿತು. ಆದರೆ ಸರಕಾರದ ಜವಾಬ್ದಾರಿ ಮಾತ್ರ ಹಾಗೆಯೇಉಳಿದಿದೆ ಎನ್ನುವುದನ್ನು ಯಾರೂ ಮರೆಯಬಾರದು. ಹೀಗೆ ಇರತಕ್ಕಂಥ ಕಾಲದಲ್ಲಿ ಇದಕ್ಕೆ ಒಂದು ಅಮೆಂಡ್ ಮೆಂಟ್‌ನ್ನು ತಂದಿದ್ದಾರೆ. ಇದರ ಮುಖ್ಯ ಅಂಶ ಏನೆಂದರೆ ಅವರು ಹೇಳಿದ ಹಾಗೆ ಈ ಹೌಸಿಂಗ್ ಬೋರ್ಡಗೆ ಹೌಸಿಂಗ್ ಕಮೀಷನರ್, ಎಕ್ಸಿಕ್ಯೂಟಿವ್ ಇಂಜನೀಯರ್ಸ್ ಮತ್ತು ಸೆಕ್ರೆಟರಿ ಇವರು ಮೂವರುಗಳು ಸೇರಿ ಒಂದು ಟ್ರಯಂವರೇಟ್ Triamvirate, ಇದ್ದ ಹಾಗೆ ಎಲ್ಲೆಲ್ಲಿ ಏನೇನು ಆಗುತ್ತದೋ ಗೊತ್ತಿಲ್ಲ. ಯಾವಾಗಲೂ ಸ್ವಲ್ಪ ಜಗಳ ಅಶುದ್ಧತೆ ಬಗ್ಗೆ ಕೆಲವರಿಗೆ ಸಂದೇಹ ಇದೆ. ಅಲ್ಲದೆ ತಮಗೆ ಗೊತ್ತಿದ್ದ ಹಾಗೆ ಅಲ್ಲಿ ಎರಡು ತರಹ ಅಟಾನಮಿ ಇದೆ. ಒಂದು ಅಡ್ಮಿನಿಸ್ಟ್ರೇಷನ್ ಅಟಾನಮಿ, ಎರಡು ಫೈನಾನ್ಸಿಯಲ್ ಅಟಾನಮಿ, ಇದು ಯಾವ ತರಹ ಅಟಾನಮಿಗೂ ಸಂಬಂಧವಿಲ್ಲ. ಈಗ ಅಲ್ಲಿ ಇರುವ ಆಫೀಸರ್ಸ್ ಜಾನ್, ರಾಬಿನ್‌ಸನ್ ಅಂತಹವರಲ್ಲ. ರಂಗಪ್ಪ, ತಿಮ್ಮಪ್ಪ ಅಂತಹವರು ಇರುವುದರಿಂದ ಸಾರ್ವಜನಿಕ ಕ್ಷೇತ್ರಕ್ಕೂ, ಸರಕಾರಕ್ಕೂ ಹೊಂದಾಣಿಕೆ ಇದ್ದೇ ಇರಬೇಕು. ಈ ಹೌಸಿಂಗ್ ಪ್ರಾಬ್ಲಮ್ ಒಂದೇ ವರ್ಷದಲ್ಲಿ ಮುಗಿಯುವುದಿಲ್ಲ. ದೇಶದಲ್ಲಿ ಲ್ಯಾಂಡಲೆಸ್ ಎಷ್ಟು ಇದ್ದಾರೋ ಅದೇ ರೀತಿಯಲ್ಲಿ ಹೌಸಲೆಸ್ ಪೀಪಲ್ ಇದ್ದೇ ಇದ್ದಾರೆ. ಆದುದರಿಂದ ಹೌಸ್‌ಲೆಸ್ ಪೀಪಲ್‌ಗೆ ಹೌಸ ಇರಬೇಕಾದುದು. ಅವಶ್ಯಕತೆ ಇದೆ. ನಾನು ಮೊದಲೇ ಹೇಳಿದ ಹಾಗೆ ಈ ಹೌಸಿಂಗ್ ಬೋರ್ಡಗೆ ಹೌಸಿಂಗ್ ಕಮೀಷನರ್, ಎಕ್ಸಿಕ್ಯೂಟೀವ್ ಇಂಜನೀಯರ್ಸ್ ಮತ್ತು ಸೆಕ್ರೆಟರಿ ಈ ಮೂವರು ಮೂರು ಪಿಲ್ಲರ್ಸ್ ಇದ್ದ ಹಾಗೆ ಆದರೆ ಅವರಿಗೆ ಅಧಿಕಾರಿ ಇರಬೇಕು. ಆದರೆ ಲಿಮಿಟೆಡ್ ಪವರ್ ಇರಬೇಕು ಎಂದು ಹೇಳುತ್ತೇನೆ. ಆದುದರಿಂದ ಈ ಬಿಲ್ಲಿನಲ್ಲಿ (During the pleasure of the Government) ಡ್ಯೂಯರಿಂಗ್ ದಿ ಪ್ಲೆಷರ್ ಆಫ್ ದಿ ಗೌರ್ನಮೆಂಟ್ ಅಂತ ಏನು ಇದೆ ಅದರ ಮುಖ್ಯ ಅರ್ಥ ಸರಕಾರ ಯಾವಾಗ ಬೇಕಾದರೂ ಆವಾಗ, ಯಾರನ್ನು ಬೇಕಾದರೂ ಅವರನ್ನು ಕಿತ್ತು ಹಾಕಬೇಕು. ಎನ್ನುವ ಅರ್ಥವಲ್ಲ.

ಏನಾದರೂ ಅಲ್ಲಿ ದುರಾಡಳಿತ ಕಂಡುಬಂದಲ್ಲಿ ಸರಕಾರಕ್ಕೆ ಇರುವ ಅಧಿಕಾರವನ್ನು ಉಪಯೋಗಿಸಿ ಕೆಲಸ ಸುಗಮವಾಗಿ ಆಗುವಂತೆ ಮಾಡುವುದು ಮುಖ್ಯ ಗುರಿ. ತಪ್ಪು ಇಲ್ಲವೆ ಅಧಿಕಾರಿಯವರ ಮೇಲೆ ದುರುಪಯೋಗ ಮಾಡುವುದಿಲ್ಲ. ಆದರೂ ಸಹ ಇದರಲ್ಲಿ ಒಂದು ತಪ್ಪು ಇದೆ. ಈ ಬಿಲ್ಲಿನಲ್ಲಿ ಹೌಸಿಂಗ್ ಬೋರ್ಡಿನಲ್ಲಿ ಹೌಸಿಂಗ್ ಕಮೀಷನರ್‌ಗೆ, ಎಕ್ಸಿಕ್ಯೂಟೀವ್ ಇಂಜನೀಯರ್ಸ್‌ಗೆ, ಅಡ್ಮಿನಿಸ್ಟ್ರೇಟೀವ್ ಪವರ್ಸ್ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಫೈನಾನ್ಸಿಯಲ್ ಕಂಟ್ರೋಲ್ ಸಹ ಕೊಟ್ಟಿದ್ದಾರೆ. ಇನ್ನು ಈ ಹೌಸಿಂಗ್ ಬೋರ್ಡಿನ ಸ್ಟ್ಯಾಫ್ ಪ್ಯಾಟ್ರನ್ ತೆಗೆದುಕೊಂಡರೆ ಕರ್ನಾಟಕ ಪಿ. ಎಸ್. ಸಿ. ಅವರ ರೂಲ್ಸ್ ಅಂಡ್ ರೆಗ್ಯೂಲೇಷನ್ಸ್ ಏನು ಇದೆ ಅದಕ್ಕನುಗುಣವಾಗಿ ನಡೆಯಬೇಕು ಎನ್ನುವುದು ಸಹ ಇದೆ. ಇದರ ಜೊತೆಗೆ ಅಪಾಯಿಂಟ್‌ಮೆಂಟ್ಸ್ ಬಗ್ಗೆಯೂ ಹೇಳಿದ್ದಾರೆ. ಲೋಕಲ್ ಕ್ಯಾಂಡಿಡೇಟ್ಸ್ ಇದ್ದರೆ ಅವರು ಇದರಲ್ಲಿ ಒಂದು ವರ್ಷ ಪ್ರೊಬೆಷನರಿ ಆಗಿ ವರ್ಕ್ ಮಾಡಬೇಕು ಎಂದು ಹೇಳಿದ್ದಾರೆ. ಇವೆಲ್ಲಾ ಡಿಟೇಲ್ ಆಫ್ ಅಡ್ಮಿನಿಸ್ಟ್ರೇಟಿವ್ ಮ್ಯಾಟರ್ಸ್ ಆದುದರಿಂದ ನಾನು ಈ ವಿಚಾರದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಈ ಹೌಸಿಂಗ್ ಬೋರ್ಡಿನಲ್ಲಿ ಈಗ ಇರತಕ್ಕಂಥ ಸದಸ್ಯರ ಸಂಖ್ಯೆಯನ್ನು ೧೨ ರಿಂದ ೧೫ ಕ್ಕೆ ಏರಿಸಿದ್ದಾರೆ ಅನ್ನುವ ಮಾತನ್ನು ಮಾನ್ಯ ಮಿತ್ರರೊಬ್ಬರು ಹೇಳಿದರು. ಇದರಲ್ಲಿ ತಪ್ಪೇನೂ ಇಲ್ಲ ಎಂದು ನಾನು ಹೇಳುತ್ತೇನೆ. ಏತಕ್ಕೆಂದರೆ ಸಾರ್ವಜನಿಕ ಕ್ಷೇತ್ರದಲ್ಲಿ ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಇರಬೇಕು ಎಂದು ನನ್ನ ಭಾವನೆ. ಕಾನ್‌ಸೆಂಟ್ರೇಷನ್ ಆಫ್ ಪವರ್ಸ್ ಒಂದೇ ಕಡೆ ಇರಬಾರದು. ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಇದ್ದರೆ ಅದರಲ್ಲಿ ಒಬ್ಬೊಬ್ಬರಿಗೆ ಒಂದೊಂದು ಅಧಿಕಾರ ಸಿಕ್ಕುವುದಲ್ಲದೆ ಕಲೆಕ್ಟೀವ್ ವಿಸಡಂ ಬೆಳೆಸಲು ಸಹ ಆಗುತ್ತದೆ. ಆದುದರಿಂದ ಈ ಅಧಿಕಾರವನ್ನು ಸರ್ವರಿಗೂ ಸಮಾನವಾದ ರೀತಿಯಲ್ಲಿ ಸರಕಾರ ರಚಿಸಬೇಕಾದ ಅವಶ್ಯಕತೆ ಇರುವಾಗ ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಇರುವುದು ಒಳ್ಳೆಯದು ಎಂದು ಒತ್ತಿ ಹೇಳುತ್ತೇನೆ. ಆದುದರಿಂದ ಇದರ ಸಂಖ್ಯೆಯನ್ನು ೧೨ ರಿಂದ ೧೫ ಕ್ಕೆ ಏರಿಸಿದ್ದಾರೆ. ಆದರೆ ಇದು ಯಾವ ತರಹ ಇರಬೇಕು ಎನ್ನುವುದನ್ನು ಹೇಳುತ್ತೇನೆ. ಈ ಹೌಸಿಂಗ್ ಬೋರ್ಡ್ ಕೆಲಸ ಒಂದು ವರ್ಷದಲ್ಲಿ ಮುಗಿಯುವಂಥ ಕೆಲಸವಲ್ಲ. ಇದರಲ್ಲಿ ಯಾವ ಯಾವ ಸದಸ್ಯರು ಇರಬೇಕು ಎನ್ನುವುದರ ಬಗ್ಗೆ ಸಲಹೆ ಕೊಡುತ್ತೇನೆ. ಇದು ಮನೆ ನಿರ್ಮಾಣ ವಿಷಯಕ್ಕೆ ಸಂಬಂಧಪಟ್ಟಿದ್ದರಿಂದ ನಾನು ಈ ಮಾತನ್ನು ಹೇಳುತ್ತೇನೆ. ಇದರಲ್ಲಿ ಯಾರು ಯಾರು ಇರಬೇಕು ಎಂದರೆ ಮೇಯರ್, ಮೆಟ್ರೋಪಾಲಿಟನ್ ಮೆಂಬರ್, ಸಿ. ಐ. ಟಿ. ಬಿ. ಮೆಂಬರ್, ವಾಟರ್ ಬೋರ್ಡ್ ಮೆಂಬರ್ **Town Planning Officer, Bangalore Development authority Chairman** ಈ ರೀತಿಯಾಗಿ ಈ ಮನೆಗೆ ಸಂಬಂಧಪಟ್ಟವರು ಯಾರು ಯಾರು ಇರುತ್ತಾರೋ ಅವರೆಲ್ಲಾ ಸದಸ್ಯರಾಗಿ ಇರಬೇಕೇ ಹೊರತು ರಿಟೈರ್ಡ್ ಆಫಿಸರ್ಸ್ ಆಗಲಿ, ಎಂ. ಎಲ್. ಎ. ಆಗಲಿ ಇದರಲ್ಲಿ ಇರುವುದು ಮುಖ್ಯ ಉದ್ದೇಶ ಅಲ್ಲ. ಕಾನ್ಸ್ಟಿಟ್ಯೂಟ್ ಆಫ್ ದಿ ಬೋರ್ಡ್ ಯಾವರೀತಿ ಇರಬೇಕು ಎಂದರೆ ಅದರಲ್ಲೂ ಸಹ ನಾಮಿನೇಷನ್ ಇದೆಯೆಲ್ಲಾ ಅದನ್ನು ಮಾಡುವ ಕಾಲದಲ್ಲಿ ಇದರ ಮೂಲ ಉದ್ದೇಶ ಏನು ಇದೆ ಅದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು. ಈಗ ನಮ್ಮ ರಾಜ್ಯದಲ್ಲಿ ಅನೇಕ ತರಹ **Scheme** ಗಳಾಗಿ ಇರುವುದು ತಮಗೆಲ್ಲಾ ಗೊತ್ತೇಇದೆ.

ಅರ್ಬನ್ ಹೌಸಿಂಗ್ ಸ್ಕೀಮ್, ಲೋ ಹೌಸಿಂಗ್ ಸ್ಕೀಮ್, ಮಿಡಲ್ ಹೌಸಿಂಗ್ ಸ್ಕೀಮ್ ಪೀಪಲ್ ಹೌಸಿಂಗ್ ಸ್ಕೀಮ್, ಈ ರೀತಿಯಾಗಿ ಏನೇನೋ ಸ್ಕೀಮ್ ಇದೆಯೆಲ್ಲಾ ಇದರ ಬಗ್ಗೆ ಎಷ್ಟು ಬೋರ್ಡ್ ಇದ್ದರೂ ಸಹ ನಾವು ನಿರೀಕ್ಷಿಸಿಕೊಂಡಿದ್ದಷ್ಟು ಕೆಲಸ ಆಗಿಲ್ಲ ಎಂದರೆ ತಪ್ಪಾಗಲಾರದು ಪೀಪಲ್ ಹೌಸಿಂಗ್ ಸ್ಕೀಮ್ ಜಾರಿಗೆ ತರುವುದು ಸರ್ಕಾರದ ಘನ ಉದ್ದೇಶವಾಗಿದೆ. ಅಂದರೆ ಅದನ್ನು ಕಾರ್ಯಗತ ಮಾಡುವ ಕಾಲದಲ್ಲಿ ನಿಮಗೆ ಮುಖ್ಯ ಅಡಚಣೆ ಇರುವುದು ಏನು, ದುಡ್ಡು, ಜಮೀನು ಅದರಲ್ಲೂ ಸಹ ತಮಗೆ ಗೊತ್ತಿದ್ದ ಹಾಗೆ ಹೌಸಿಂಗ್ ಬೋರ್ಡ್‌ನ್ನೇ ನಂಬಿ ಅನೇಕ ಜನ ಸಾರ್ವಜನಿಕ ಕ್ಷೇತ್ರದಲ್ಲಿ ಏನು ಮನೆ ಕಟ್ಟಿಸುತ್ತಾ ಇದ್ದರೋ ಅವರಿಗೆ ೪-೬ ತಿಂಗಳ ಹಿಂದೆ ದುಡ್ಡು ಕೊಡುವುದನ್ನು ನಿಲ್ಲಿಸಿಬಿಟ್ಟಿರಿ. ಈ ಹೌಸಿಂಗ್ ಬೋರ್ಡ್ ದುಡ್ಡು ಬರುತ್ತದೆ ಎಂದು ನಂಬಿಕೊಂಡಿದ್ದಂಥ ಕೆಲವರು ಸಾಲಸೋಲ ಮಾಡಿ ಅರ್ಧಮನೆ ಇರುವುದನ್ನು ಪೂರ್ತಿ ಮಾಡಲು ಆಗದೆ ಮಾಡಿದ್ದಾರೆ. ಇನ್ನು ಕೆಲವರು ಅರ್ಧಮನೆ ಕಟ್ಟಿಸಿದ್ದಾರೆ, ಇನ್ನು ಕೆಲವರು ಈ ರೀತಿಯಾಗಿ ಮನೆ ಕಟ್ಟಿಸುವುದಕ್ಕೆ ತಮ್ಮ ಹತ್ತಿರ ಇರತಕ್ಕಂಥ ಒಡವೆಗಳನ್ನು ಗಿರಿವಿ ಇರಿಸಿ ಮನೆ ಕಟ್ಟಿದ್ದಾರೆ. ಆದರೆ ಅವರಿಗೆ ಹೌಸಿಂಗ್‌ಬೋರ್ಡ್ ಸಾಲ ಕೊಡಲಿಲ್ಲ. ಇದರ ಮಧ್ಯ ಅವರು ಹಾಕಿಕೊಂಡಿದ್ದ ಮೊದಲಿನ ಪ್ಲಾನಿಗೂ, ನಂತರ ಅವರು ಮನೆ ಕಟ್ಟಿಸುವ ಸಂದರ್ಭಕ್ಕೆ ಸಿಮೆಂಟ್ ಮತ್ತು ಕಬ್ಬಿಣದ ರೇಟ್ ಬಹು ಜಾಸ್ತಿಯಾಗಿಬಿಟ್ಟಿದೆ. ಹೀಗಾದರೆ ಅವರ ಗತಿ ಏನಾಗಬೇಕು ಹೇಳಿ. ಅವರೆಲ್ಲರೂ ಸರ್ಕಾರಿ ನೌಕರರು ಇದನ್ನೇ ನಂಬಿಕೊಂಡಿದ್ದವರಿಗೆ ಈ ಹೌಸಿಂಗ್‌ಬೋರ್ಡ್‌ನಿಂದ ಹಣ ಬರುವುದು ನಿಂತು ಹೋಯಿತು ಎಂದರೆ ಅವರ ಗತಿ

ಏನು ? ಈ ದೃಷ್ಟಿಯಿಂದ ನಾನು ಹೇಳುವುದು ಏನೆಂದರೆ ಯಾರು ಇದನ್ನು ನಂಬಿಕೊಂಡು ಸಾಲ ಸೋಲಗಳನ್ನು ತೆಗೆದುಕೊಂಡು ಅಂದಿದ್ದರೋ ಅವರಿಗೆ ಆದಷ್ಟು ಜಾಗ್ರತೆ ಸರ್ಕಾರ ಸಹಾಯಮಾಡಬೇಕು ಅಲ್ಲದೆ ತಾವು ಈ ಹಣ ಏನು ಸೆಂಕ್ಷನ್ ಆಗುತ್ತದೆ ಅದನ್ನು ಕೂಡಲೇ ಕೊಡುವುದಕ್ಕೆ ಒಂದು ಕಾಲ ಪರಿಮಿತಿ ಹಾಕಬೇಕು. ಉದಾಹರಣೆಗೆ ಆತನಿಗೆ ಹೌಸಿಂಗ್ ಬೋರ್ಡ್ ಹಣ ೩ ವರ್ಷದ ಹಿಂದೆ ಸ್ಯಾಂಕ್ಷನ್ ಆಗಿದ್ದರೂ ಆತನಿಗೆ ಈಗ ಹಣ ಕೊಟ್ಟರೆ ಅದುವರೆಗೆ ಕಬ್ಬಿಣ, ಸಿಮೆಂಟ್ ಇನ್ನು ಇತರ ಬೆಲೆಗಳೂ ಸಹ ಏರಿರುತ್ತದೆ. ಇದರಿಂದ ಆತನಿಗೆ ಹಣ ದೊರಕಿದರೂ ಕೂಡ ಅವನ ಗುರಿ ಮುಟ್ಟಲಿಕ್ಕೆ ಆಗುವುದಿಲ್ಲ. ಈ ಕಾರಣದಿಂದ ಅವನಿಗೆ ಸ್ಯಾಂಕ್ಷನ್ ಆದಕೂಡಲೇ ಸಾಧ್ಯವಾದಷ್ಟುಜಾಗ್ರತೆ ಹಣ ದೊರಕುವಂಥ ಸೌಲಭ್ಯ ಮಾಡಿಕೊಡಬೇಕು ಎಂದು ಒತ್ತಿ ಹೇಳುತ್ತೇನೆ. ಮತ್ತು ಆ ಹಣ ಸ್ಯಾಂಕ್ಷನ್ ಮಾಡುವಾಗ ಅಥವಾ ಕೊಡುವಾಗ ಆ ಪೀರಿಯಡ್‌ನಲ್ಲಿ ಚೇರ್ಮನ್ ಯಾರಾದರೂ ಇರಬಹುದು, ಸೆಕ್ರೆಟರಿಯಾದರೂ ಇರಬಹುದು, ಅದು ಮುಖ್ಯವಲ್ಲ. ಯಾರೇ ಇರಲಿ ಸ್ಯಾಂಕ್ಷನ್ ಮಾಡಿದ ಹಣವನ್ನು ಎಷ್ಟು ಬೇಗ ಅವರಿಗೆ ಕೊಟ್ಟರೆ ಅಷ್ಟೂ ಒಳ್ಳೆಯದು. ಈ ರೀತಿ ಅವರು ಸಹಾಯ ಮಾಡಬೇಕು. ಈ ಬಗ್ಗೆ ಈ ಬಿಲ್ಲನ್ನು ತರುವ ಮೊದಲೇ ಯೋಚನೆ ಮಾಡಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ.

ಇನ್ನು ಶ್ರೀ ಟಿ. ಆರ್. ಶಾಮಣ್ಣನವರು ಇದರಲ್ಲಿ ಪ್ಯಾನಲ್ ನೇಮ್ಸ್ ಇರಬೇಕಾಗಿತ್ತು ಎಂದು ಹೇಳಿದರು. ಪ್ಯಾನಲ್‌ನಲ್ಲಿ ಇಂಜನೀಯರ್ಸ್ ಇರಬಹುದು, ಕಮೀಷನರ್ ಇರಬಹುದು. ಸೆಕ್ರೆಟರಿ ಇರಬಹುದು. ಯಾರಾದರೂ ಇರಲಿ ಮುಖ್ಯವಾಗಿ ದಕ್ಷತೆಯಿಂದ ಕೆಲಸ ಮಾಡಿ ಬಡ ಜನತೆಗೆ ಸಹಾಯ ಮಾಡುವವರನ್ನು ಈ ಬೋರ್ಡ್‌ನಲ್ಲಿ ಹಾಕಬೇಕು ಎಂದು ಹೇಳುತ್ತೇನೆ. ಅಂಥವರನ್ನು ಬೋರ್ಡ್‌ನ ಅಧ್ಯಕ್ಷತೆ ನೇಮಕ ಮಾಡುವಾಗ ಅವರ ಚಾರಿತ್ರ್ಯ ಹಸ್ತ ನಿಷ್ಪಕ್ಷ ಏಕ ಶುದ್ಧತೆ ಇರುವವರನ್ನು ಹಾಕಿದರೆ ಒಳ್ಳೆಯದು. ಏತಕ್ಕೆಂದರೆ ಮನೆ ಪ್ರಶ್ನೆ ಸಂಬಂಧವಾದುದರಿಂದ ಅಂಥವರನ್ನು ಹಾಕಬೇಕು. ಆದುದರಿಂದ ಪ್ಯಾನಲ್ ನೇಮ್ಸ್ ಇದರಲ್ಲಿ ಇರಬೇಕಾಗಿತ್ತು ಎಂದು ಹೇಳುವುದು ಅಷ್ಟು ಸಮಂಜಸವಾದುದಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಈ ಬಿಲ್ಲಿನಲ್ಲಿ ಡ್ಯೂಯರಿಂಗ್ ದಿ ಪ್ಲೆಷರ್ ಆಫ್ ದಿ ಗೌರ್ನಮೆಂಟ್ ಅಂತ ಪದ ಇದ್ದ ಮಾತ್ರಕ್ಕೆ ಪ್ರತಿಯೊಂದು ಕೆಲಸಕ್ಕೂ ಸರ್ಕಾರ ಕೈಹಾಕಬೇಕಾದ್ದಿಲ್ಲ. ಇಷ್ಟಬಂದಂತೆ ಸರ್ಕಾರ ಕೆಲಸ ಮಾಡುವುದಿಲ್ಲ. ಇದಕ್ಕೆ ಕೆಲವು ವಿಧಿನಿಯಮಗಳು ಇರುತ್ತವೆ. ಆ ವಿಧಿನಿಯಮಗಳಿಗನುಸಾರವಾಗಿ ಬೋರ್ಡ್ ಕೆಲಸ ಮಾಡಿದ್ದರೆ ಅದನ್ನು ಮೊಟಕು ಮಾಡುವುದಿಲ್ಲ. ಏನಾದರೂ ತಪ್ಪು ಮಾಡಿದರೆ ಆಗ ಸರ್ಕಾರ ಅದರ ಮೇಲೆ ಹಿಡಿತ ಇರಬೇಕು ಎನ್ನುವ ಉದ್ದೇಶದಿಂದ ಡ್ಯೂಯರಿಂಗ್ ದಿ ಪ್ಲೆಷರ್ ಆಫ್ ದಿ ಗೌರಮೆಂಟ್ ಅಂತ ಪದ ಇದೇ ಹೊರತು ಇನ್ನಾವ ಉದ್ದೇಶವೂ ಇಲ್ಲ. ಮಂತ್ರಿಗಳಿಗೂ ಮತ್ತು ಮಂಡಲಿಯವರಿಗೂ ಏನು ಭಿನ್ನಾಭಿಪ್ರಾಯ ಇತ್ತು ಅದಕ್ಕೋಸ್ಕರ ಈ ಬಿಲ್ಲನ್ನು ತಂದಿಲ್ಲ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಈ Board Fund ಬೋರ್ಡ್ ಫಂಡ್ ಬಗ್ಗೆ ಹೇಳುವುದಾದರೆ ನೀವು ಸರಿಯಾಗಿ ಪ್ರಯತ್ನ ಮಾಡಿದರೆ ಹಣಕ್ಕೇನೂ ತೊಂದರೆ ಇರುವುದಿಲ್ಲ. ನ್ಯಾಷನಲೈಸ್ಡ್ ಬ್ಯಾಂಕ್‌ನಿಂದ ಮತ್ತು ಕೇಂದ್ರ ಸರ್ಕಾರದಿಂದ ಈ ಸ್ಕೀಮಿಗೆ ಬೇಕಾದಷ್ಟು ಹಣ ಸಹಾಯ ಮಾಡುತ್ತಾರೆ. ಆದರೆ ಅದಕ್ಕೆ ನೀವು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದರಿಂದ ಈ ರೀತಿಯಾಗಿದೆ. ಉದಾಹರಣೆಗೆ ಸ್ಲಮ್‌ಕ್ಲಿಯರೆನ್ಸ್‌ಗೆ ಇಡೀ ದೇಶದಲ್ಲಿ ೧೧ ಪಟ್ಟಣಗಳನ್ನು ಕೇಂದ್ರ ಸರ್ಕಾರದವರು ಅದು ೧೦ ಕೋಟಿ ರೂಪಾಯಿ ಪ್ರಾಜೆಕ್ಟ್ ಇದೆ. ಆದರೆ ಅದರ ಮೂಲಕ ಈ ೧೧ ಪಟ್ಟಣಗಳನ್ನು ಆರಿಸಿ ಸ್ಲಮ್‌ಕ್ಲಿಯರೆನ್ಸ್ ಕಾರ್ಯನಡೆಸಬೇಕು ಎಂದು ಸರ್ಕಾರ ಮಾಡಿದ್ದಾರೆ. ಆದರೆ ನಾವು ಕಾರ್ಯಗತ ಮಾಡುವುದರಲ್ಲಿ ಬಹಳ ಹಿಂದೆ ಬಿದ್ದೇವೆ. ಕೆಲವು ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ಕೊಟ್ಟ ಹಣವೂ ಕೂಡ laps ಆಗಿ ಇರುವುದರ ಸನ್ನಿವೇಶಗಳೂ ಇವೆ. ಇದಕ್ಕೆ ನಾವು ಯಾರನ್ನು ದೂಷಿಸಬೇಕೆಂದು ಗೊತ್ತಾಗಲಿಲ್ಲ.

ಈ ಸ್ಲಂ ಕ್ಲಿಯರೆನ್ಸ್ ಬೋರ್ಡಿನ ವಿಚಾರ ಆಗಾಗ್ಗೆ ಪತ್ರಿಕೆಗಳಲ್ಲಿ ಕೇಳಿಬರುತ್ತಿದೆಯೇ ವಿನಾ ಇದು ನಿಜವಾಗಿಯೂ ಕಾರ್ಯತಃ ಏನು ಸೌಲಭ್ಯಗಳನ್ನು ಜನತೆಗೆ ಒದಗಿಸಿಕೊಟ್ಟಿದೆ ಎಂಬ ವಿಚಾರ ಇನ್ನೂ ಚೆನ್ನಾಗಿ ಗೊತ್ತಾಗುತ್ತಿಲ್ಲ. ಈ ಕೊಳಚೆ ಪ್ರದೇಶದಲ್ಲಿ ಇರತಕ್ಕ ಜನರಿಗೆ ಕಾರ್ಯಾಚರಣೆ. ಆಗಲಿಲ್ಲ ಅವರ ಎನ್‌ವಿರನ್‌ಮೆಂಟ್ ಬದಲಾವಣೆಯಾಗುವುದಕ್ಕೆ ಸರಕಾರದ ಸಲಹೆ ಇದ್ದರೂ ನೆನಸಿದ ಆದರೆ ನಮ್ಮ ಸಿಟಿ ರೇಲ್ವೆಸ್ಟೇಷನ್ ಬಳಿ ಮತ್ತು ಕೋರಮಂಗಲ ಲೇ ಔಟಿನ ಹತ್ತಿರ ಇವರಿಗಾಗಿ ಒಂದೆರಡು ಮನೆಗಳನ್ನು ಕಟ್ಟಿಸಿದರೆ ಅವರಿಗೇನೂ ಪ್ರಯೋಜನವಾಗುವುದಿಲ್ಲ. ರಾಜ್ಯದಲ್ಲಿ ಬೇಕಾದಷ್ಟು ಇದಕ್ಕೆ ಬೇಕಾದ ಮೆಟೀರಿಯಲ್ಸ್ ಇದೆ. ಇದನ್ನು ಉಪಯೋಗ ಮಾಡಿಕೊಂಡು ಕೇಂದ್ರ ಸರ್ಕಾರಕ್ಕೆ ಎಷ್ಟು ಒತ್ತಾಯ

ಹಾಕಬಹುದೋ ಅಷ್ಟನ್ನೂ ಹಾಕಿ ಈ ಹೌಸಿಂಗ್‌ಬೋರ್ಡ್ ಇನ್ನೂ ಉತ್ತಮ ರೀತಿಯಲ್ಲಿ ಕೆಲಸ ಮಾಡುವಂತೆ ಮಾಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ. ಜೈ ಕರ್ನಾಟಕ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :—ಮಾನ್ಯ ಅಧ್ಯಕ್ಷರೇ ನಮ್ಮ ಮುಂದೆ ಸಚಿವರು ಮಂಡಿಸಿರತಕ್ಕ ಹೌಸಿಂಗ್‌ಬೋರ್ಡ್ ಬಿಲ್ಲನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಅದಕ್ಕೆ ಕಾರಣಗಳೆಂದರೆ ಮಾನ್ಯ ರಂಗನಾಥ್ ಅವರು ಬಹಳ ಕಾಲದಿಂದಲೂ ಒಬ್ಬ ಕಟ್ಟಾ ಸಮಾಜವಾದಿ. ಆದುದರಿಂದ ಅವರಿಗೆ ನಾನು ಈಗ ಹೊಸದಾಗಿ ಈ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಹೇಳಿಕೊಡಬೇಕಾದ್ದಿಲ್ಲ. ಸಮಾಜದಲ್ಲಿ ವಿಕೇಂದ್ರೀಕರಣಕ್ಕೆ ಬಹಳ ಮಹತ್ವ ಹಾಗೂ ಹೆಚ್ಚಿನ ಪ್ರಾಧಾನ್ಯತೆ ಇದೆ. ಈ ಸ್ವಾಯತ್ತ ಸಂಸ್ಥೆಗಳಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟು ಅವು ನಿರ್ಭೀತಿಯಿಂದ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾದ್ದು ಈ ಪ್ರಜಾಪ್ರಭುತ್ವದ ಒಂದು ಮುಖ್ಯ ಲಕ್ಷಣ. ಅಂಥ ಒಂದು ದೊಡ್ಡ ಜವಾಬ್ದಾರಿ ಈ ದಿವಸ ಈ ಸರ್ಕಾರದ ಮೇಲಿದೆ, ಆದರೆ ಆ ಸ್ವಾಯತ್ತ ಸಂಸ್ಥೆಗಳ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಹರಣ ಮಾಡುವುದಕ್ಕೆ ಈ ಮಸೂದೆಯನ್ನು ಸರ್ಕಾರ ತಂದಿದೆ ಎಂಬುದು ನನ್ನ ದೊಡ್ಡ ಆಪಾದನೆ. ಈ ವಿಚಾರದಲ್ಲಿ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಇದರಲ್ಲಿರತಕ್ಕ ವಿಧಿಗಳನ್ನು ವಿಶ್ಲೇಷಣೆಮಾಡಿ ಸವಿಸ್ತಾರವಾಗಿ ಇದನ್ನು ಹೇಳಿದ್ದಾರೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಇದಕ್ಕೆ ಒಂದು ಖಾಯಿಲೇ ಈ ಸ್ವಾಯತ್ತ ಸಂಸ್ಥೆಗಳ ಬಗ್ಗೆ ಬಂದಂತೆ ಕಾಣುತ್ತಿದೆ. ಸರ್ಕಾರದವರು ಈ ಹೌಸಿಂಗ್‌ಬೋರ್ಡ್ ಒಂದರ ವಿಚಾರದಲ್ಲೇ ಅಲ್ಲ ಹೀಗೆ ಅಧಿಕಾರವನ್ನು ಕಸಿದುಕೊಳ್ಳುವುದಕ್ಕೆ ಹೊರಟಿರುವುದು ಹೀಗೆ ಇನ್ನೂ ನಾಲ್ಕಾರು ಸ್ವಾಯತ್ತ ಸಂಸ್ಥೆಗಳ ಅಧಿಕಾರವನ್ನು ಹರಣಮಾಡುವುದಕ್ಕೆ ಇದೇ ರೀತಿ ಪ್ರಯತ್ನಗಳನ್ನು ಮಾಡಿದೆ. ಈ ಒಂದು ಪ್ರವೃತ್ತಿ ಈ ಸರ್ಕಾರಕ್ಕೆ ಸಂಪೂರ್ಣವಾಗಿ ಅಂಟಿಕೊಂಡ ಹಾಗೆ ಕಾಣುತ್ತಿದೆ. ಇದು ಏನು ಸೂಚಿಸುತ್ತಿದೆ. ಎಂದರೆ ಈ ಸರ್ಕಾರಕ್ಕೆ ಅಧಿಕಾರದಾಹ ತೃಷೆ ಅನ್ನುವುದು ಬಹಳವಾಗಿದೆ. ಎಂಬುದನ್ನು ಎತ್ತಿ ಹಿಡಿಯುತ್ತಿದೆ. ಈ ಸ್ವಾಯತ್ತ ಸಂಸ್ಥೆಗಳ ಕೈಯ್ಯನ್ನು ಇನ್ನೂ ಬಲಪಡಿಲು ಹೆಚ್ಚಿನ ಅಧಿಕಾರರಳನ್ನು ಕೊಡುವುದಕ್ಕೆ ಇಂಥ ಮಸೂದೆಗಳನ್ನು ತಂದಿದ್ದರೆ ನಾನು ಆಗ ಇದಕ್ಕೆ ವಿರೋಧ ಮಾಡುತ್ತಿರಲಿಲ್ಲ. ಆದರೆ ಈ ದಿವಸ ಸರ್ಕಾರದವರು ಪ್ರಜಾಪ್ರಭುತ್ವಾಗಳೆಂದು ಬಾಯಲ್ಲಿ ಹೇಳಿಕೊಳ್ಳುತ್ತ ಹೀಗೆ ಇವುಗಳ ಅಧಿಕಾರವನ್ನು ಮೊಟಕು ಮಾಡುವುದಕ್ಕೆ ಹೊರಟಿರುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ. ಈ ಸ್ವಾಯತ್ತ ಸಂಸ್ಥೆಗಳನ್ನು ಸರ್ಕಾರ ತನ್ನ ಕೈಗೊಂಬೆಗಳನ್ನಾಗಿ ಮಾಡಿಕೊಳ್ಳಲು ಹವಣಿಸುತ್ತಿದೆ. ಇಂಥ ಸಂಸ್ಥೆಗಳಿದ್ದರೇನು ಇಲ್ಲದಿದ್ದರೇನು ? ನಾನು ಕೇಳುತ್ತೇನೆ ಆ ಯುಗೋಸ್ಲೋವಿಯಾ ದೇಶದಲ್ಲಿ ಇಂಥ ಸ್ವಾಯತ್ತ ಸಂಸ್ಥೆಗಳಿಗೆ ಅವು ಸರ್ಕಾರವನ್ನು ಕೈಬಿಟ್ಟು ನೇರವಾಗಿ ಹೊರದೇಶಗಳೊಂದಿಗೆ ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಮಾಡತಕ್ಕ ಅಧಿಕಾರವನ್ನು ಕೊಟ್ಟಿದ್ದಾರೆಂದು ಕೇಳಿದೆ. ಅಲ್ಲಿ ಈ ಸ್ವಾಯತ್ತ ಸಂಸ್ಥೆಗಳು ಅಷ್ಟು ಸ್ವಾವಲಂಬಿಗಳಾಗಿವೆ. ಇಲ್ಲಿಯೂ ಹಾಗೆ ಮಾಡದೆ ಅವುಗಳ ಅಧಿಕಾರವನ್ನು ಕೊಟ್ಟಿದ್ದನ್ನು ಕಿತ್ತುಕೊಳ್ಳುವುದಕ್ಕೆ ಹೊರಟಿದ್ದಾರೆ. ಇದಕ್ಕೆ ಕಾರಣ ಏನು ? ನಮ್ಮ ಈ ಹೌಸಿಂಗ್ ಬೋರ್ಡು ಕಳೆದ ಒಂದೂವರೆ ವರ್ಷಗಳಿಂದ ಸ್ಥಗಿತವಾಗಿ ಅದು ಏನೂ ಕೆಲಸ ಮಾಡಲಿಲ್ಲ. ಅಲ್ಲಿನ ಅನೇಕ ಸದಸ್ಯರನ್ನು ಸರ್ಕಾರದವರೇ ಚಿತಾವಣೆ ಮಾಡಿ ರಾಜೀನಾಮೆ ಕೊಡುವಂತೆ ಮಾಡಿ ಅಲ್ಲಿ ಕೆಲಸ ಕಾರ್ಯಗಳಾಗುವುದಕ್ಕೆ ಅಡ್ಡಿಯನ್ನೊಡ್ಡಿದ್ದಾರೆ. ಅಲ್ಲಿನ ಚೇರಮನ್ನರಿಗೂ ಮತ್ತು ಸರ್ಕಾರಕ್ಕೂ ದೊಡ್ಡ ಘರ್ಷಣೆ ಎದ್ದು ಅದು ಹೈಕೋರ್ಟಿನವರೆಗೂ ಹೋಯಿತು. ಆದರೆ ಇಲ್ಲಿಯವರೆಗೂ ಈ ಸದನಕ್ಕೆ ಆ ಸ್ವಾಯತ್ತ ಸಂಸ್ಥೆಯ ಅಧ್ಯಕ್ಷರು ಮತ್ತು ಸದಸ್ಯರು ಇಂಥ ಲೋಪದೋಷಗಳನ್ನು ಮಾಡಿದ್ದಾರೆಂಬ ಬಗ್ಗೆ ಸರ್ಕಾರದವರು ಏನೂ ಹೇಳಲಿಲ್ಲ. ಹಿಂದೆ ಒಂದು ಸಂದರ್ಭದಲ್ಲಿ ಅಧ್ಯಕ್ಷರಾದವರು ಒಂದು ನಿರ್ದಿಷ್ಟ ಕೆಲಸಕ್ಕಾಗಿ ಕೊಟ್ಟ ಹಣವನ್ನು ಅದಕ್ಕೆ ಉಪಯೋಗ ಮಾಡದೆ ಅದನ್ನು ಯಾವುದೋ ಬ್ಯಾಂಕಿನಲ್ಲಿ ಇನ್‌ವೆಸ್ಟ್ ಮಾಡಿದ್ದರೆಂದು ಒಂದು ಅಪಾದನೆಯನ್ನು ಹೇಳುತ್ತಿದ್ದರು. ಅಷ್ಟೆ ಅಲ್ಲದೆ ಇನ್ನು ಕೆಲವರು ಅಲ್ಲಿ ಸಾರ್ವಜನಿಕರ ಕಟ್ಟಡಗಳಿಗಾಗಿ ಕೊಟ್ಟ ಹಣವನ್ನು ಮಂತ್ರಿಗಳ ವಾಸದ ಮನೆಗಳನ್ನು ಕಟ್ಟಿಸುವುದಕ್ಕೆ ಉಪಯೋಗ ಮಾಡಿದ್ದಾರೆಂದೂ ಇನ್ನು ಕೆಲವರು ಅಲ್ಲಿ ಸ್ವಜನ ಪಕ್ಷಪಾತ ನಡೆಯುತ್ತಿದೆಯೆಂದೂ ಹೇಳಿದ್ದರು. ಆದರೆ ಆ ಅಪಾದನೆಗಳೆಲ್ಲಾ ಹೌದೆ ಅಥವಾ ಅಲ್ಲವೆ ಎಂಬುದರ ಬಗ್ಗೆ ಸರ್ಕಾರದವರು ಇಲ್ಲಿಯ ತನಕ ಒಂದು ಚಕಾರವನ್ನು ಕೂಡ ಇಲ್ಲಿ ಎತ್ತಿಲ್ಲ.

ಆದ್ದರಿಂದ ನಾನು ಹೇಳುತ್ತೇನೆ, ತಾವು ಇದರ ಬಗ್ಗೆ ವಿವರಣೆಯನ್ನು ಕೊಡಬೇಕು. ಹಿಂದೆ ಇದ್ದ ಚೇರ್ಮನ್‌ರಿಗೂ ಮತ್ತು ಇವರಿಗೂ ವಿರಸವುಂಟಾಗಿ, ವಿರಸವನ್ನು ಮುಕ್ತಾಯಗೊಳಿಸುವುದಕ್ಕೆ ಇಂಥ ಒಂದು ತಿದ್ದುಪಡಿಯನ್ನು ಮಾಡಿಕೊಂಡು ಅವರ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಆದರೆ ನಾನು ಇಲ್ಲಿ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ತಾವು ಏನೇ ಪ್ರಯತ್ನ ಪಟ್ಟರೂ ನಿರೀಕ್ಷಿಸಿದ

ಕೆಲಸ ಆಗುವುದಿಲ್ಲ. ಸರ್ಕಾರದವರು ನಿಜವಾಗಿಯೂ ಕೆಲಸ ಮಾಡಬೇಕು, ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎನ್ನುವ ಮನಸ್ಸು ಇದ್ದರೆ ಇರತಕ್ಕ ಕಾನೂನಿನ ಪರಿಸರದಲ್ಲಿಯೇ ಕೆಲಸ ಮಾಡುವುದಕ್ಕೆ ಅವಕಾಶ ಇದೆ. ಆದರೆ ಕಾನೂನಿನಲ್ಲಿ ಕೆಲವು ಆತಂಕಗಳು ಇವೆ. ನೀವು ಹೇಳಿದ ಈ ತಿದ್ದುಪಡಿಯ ಮುಖಾಂತರ ಕೆಲವು ಲೋಪದೋಷಗಳನ್ನು ತಿದ್ದುಪಡಿ ಮಾಡುವುದಕ್ಕೆ ಇದನ್ನು ತಂದಿದ್ದೇವೆ ಎಂದು ಹೇಳಿದರೆ ಯಾರೂ ಒಪ್ಪತಕ್ಕ ಮಾತಲ್ಲ. ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರು ಇದರ ಬಗ್ಗೆ ಹೇಳಿದ್ದಾರೆ. ಅಟ್ ದಿ ಪ್ಲೆಷರ್ ಆಫ್ ದಿ ಗವರ್ನಮೆಂಟ್ ಎನ್ನುವುದನ್ನು ಸೇರಿಸಿಕೊಂಡು ತಿದ್ದುಪಡಿಯನ್ನು ತಂದಿದ್ದೀರಿ, ಇದು ಅಂತೂ ಕೆಲವರ ಕತ್ತನ್ನು ಬಲಾತ್ಕಾರವಾಗಿ ಹಿಸುಕಿ ಕೊಲೆ ಮಾಡತಕ್ಕ ಒಂದು ಅವಕಾಶ ಇದರಲ್ಲಿದೆ. ಬೋರ್ಡನ್ನು ರಚನೆ ಮಾಡತಕ್ಕ ಕಾಲದಲ್ಲಿ, ರಚನೆ ಮಾಡಿದ ಮೇಲೆ ನೀವು ಹೇಳಿದ ಹಾಗೆ, ಯಾವ ಸಂದರ್ಭ ಬಂದರೂ, ಯಾವುದು ನಿಮ್ಮ ಮನಸ್ಸಿಗೆ ಪ್ಲೆಷರ್ ಎಂದು ಆಗುತ್ತದೆಯೋ ಅದು ಯಾರಿಗೂ ಗೊತ್ತಾಗುವುದಿಲ್ಲ. ಯಾರೇ ಆಗಲಿ, ತಪ್ಪು ಮಾಡಿದರೆ ಕಿತ್ತುಹಾಕುತ್ತೇವೆನ್ನುವುದನ್ನು ಹೇಳಿ, ಅಧಿಕಾರವನ್ನು ಯಾರೇ ಆಗಲಿ ದುರುಪಯೋಗಪಡಿಸಿಕೊಂಡರೆ ಅವರನ್ನು ಕಿತ್ತುಹಾಕಬೇಕು ಎನ್ನುವ ಒಂದು ಅವಕಾಶವನ್ನು ಇಟ್ಟುಕೊಳ್ಳಿ. ಆದರೆ ಈ ರೀತಿ ಪ್ಲೆಷರ್ ಆಫ ದಿ ಗವರ್ನಮೆಂಟ್ ಎಂದರೆ ಏನು ಅರ್ಥ ? ಇದಕ್ಕೆ ಯಾವ ಅರ್ಥವನ್ನು ಕಲ್ಪಿಸಬೇಕು ? ಏನಾದರೂ ಇದರಿಂದ ಊಹೆ ಮಾಡಿಕೊಳ್ಳ ಬಹುದು. ತಲೆ ಕೆಳಗೆ ಮಾಡಿ ಎಂದರೆ, ಡ್ಯಾನ್ಸ್ ಮಾಡಿ ಎಂದರೆ ಮಾಡಬೇಕು. ಆದ್ದರಿಂದ ನೀವು "ಪ್ಲೆಷರ್ ಆಫ ದಿ ಗವರ್ನಮೆಂಟ್" ಎನ್ನುವುದರ ಸ್ಪಷ್ಟ ಅರ್ಥವನ್ನು ಹೇಳದೆ ಹೋದರೆ ಅಧಿಕಾರ ದುರುಪಯೋಗವನ್ನು ಸರ್ಕಾರ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ನೀವು ಮಂತ್ರಿಗಳು ಪ್ರಾಮಾಣಿಕರು ಇರಬಹುದು. ನಾಳೆ ಇನ್ನೊಬ್ಬರು ಬರಬಹುದು, ಇಂಥ ಒಂದು ಅವಕಾಶವನ್ನು ಉಪಯೋಗಿಸಿ ಕೊಂಡು ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಹುದು. ಯಾವ ಯಾವ ಕಾಲದಲ್ಲಿ ಯಾರು ಯಾರು ಬರುತ್ತಾರೋ ಹೋಗುತ್ತಾರೋ ಅದು ಮುಖ್ಯವಲ್ಲ. ಆದರೆ ಕಾನೂನು ಎಲ್ಲರಿಗೂ ಒಂದೇ ಇರುತ್ತದೆ. ಆದ್ದರಿಂದ ಇಂಥ ಒಂದು ಪರಮಾಧಿಕಾರವನ್ನು ಸರ್ಕಾರಕ್ಕೆ ಕೊಟ್ಟರೆ ಅವರು ತಮ್ಮ ಮನಸ್ಸಿಗೆ ಬಂದಂಥ ಕಲ್ಪನೆಯನ್ನು ಮಾಡಿಕೊಂಡು ಈ ಒಂದು ಮಂಡಳಿಯನ್ನು ಕಿತ್ತು ಹಾಕುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದು ಪ್ರಜಾಪ್ರಭುತ್ವಕ್ಕೆ ವಿರೋಧವಾದಂಥ ಮತ್ತು ನೀತಿನಿಯಮಕ್ಕೆ, ನ್ಯಾಯಕ್ಕೆ ವಿರೋಧ ವಾದಂಥ ಒಂದು ವಿಧಿ; ಇದನ್ನು ದಯವಿಟ್ಟು ತಾವು ವಾಪಸ್ ಪಡೆಯಲೇಬೇಕು.

ಇದರ ಜೊತೆಗೆ ಇನ್ನೊಂದು ಅಂಶವನ್ನು ತಾವು ಸೇರಿಸಿಕೊಂಡಿದ್ದೀರಿ. In Clause 10 Sub-section 7, it is stated 'The Chief Engineer and the Secretary shall exercise such powers and perform such functions as the Board may, subject to any general or special order of the State Government specify from time to time'. ಬೋರ್ಡಿನವರು ಕಾನೂನಲ್ಲಿ ತೋರಿಸಿರತಕ್ಕ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಅಧಿಕಾರ ಇದ್ದೇ ಇರುತ್ತದೆ. ನೀವು ಅವರಿಗೆ ಇನ್ನೂ ಹೆಚ್ಚಿನ ಕರ್ತವ್ಯವನ್ನು ನಿರ್ವಹಿಸ ಬೇಕು ಎಂದರೆ, ಅದನ್ನೂ ಸೇರಿಸಿರಿ. ಕಾನೂನು ಪ್ರಕಾರ ಈ ರೀತಿ ನೀವು ನಡೆದುಕೊಳ್ಳಬೇಕು ಎನ್ನುವು ದನ್ನು ಹೇಳಿ, ಆದರೆ ನೀವು ಇಂಥ ಕಾನೂನು ಇರುವಾಗ, ಇದರ ಜೊತೆಗೆ ಆಜ್ಞೆಯನ್ನು ಹೊರಡಿಸಿ ಇದರಂತೆ ನಡೆಯಬೇಕು ಎಂದು ಹೇಳಿದರೆ, ಈ ಕಾನೂನು ಏಕೆ? ಎಲ್ಲವನ್ನೂ ಸರ್ಕಾರದ ಆಜ್ಞೆಯ ಮುಖಾಂತರ, ಅದು ಸ್ಪೆಷಲ್ ಆಗಿ ಇರಬಹುದು, ಅಥವಾ ಜನರಲ್ ಆಗಿ ಇರಬಹುದು, ಅದರ ಮುಖಾಂತರ ಮಾಡಲಿ, ಈ ಕಾನೂನು ಏಕೆ ಬೇಕು ? ಒಂದು ಕಾನೂನು ಮಾಡಿ, ಒಂದು ಮಂಡಲಿಯನ್ನು ವ್ಯವಸ್ಥೆ ಮಾಡಿದ ಮೇಲೆ, ಆ ವ್ಯವಸ್ಥೆಯಲ್ಲಿ ಅದು ಹೋಗಬೇಕೆ ಹೊರತು ಮತ್ತೊಂದು ಸರ್ಕಾರೀ ಆಜ್ಞೆಯನ್ನು ತಲೆಯ ಮೇಲೆ ಹೊರಿಸಿ ಇದರಂತೆ ನಡೆಯಿರಿ ಎಂದರೆ ಒಂದು ಬೋರ್ಡಿನ ಎರಡು ಕಾನೂನು ಆಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ, ನೀವು ಇಂಥ ಒಂದು ಪರಮಾಧಿಕಾರವನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎನ್ನುವುದು ಸ್ಪಷ್ಟವಾಗುತ್ತದೆ. ಕಾನೂನು ಪ್ರಕಾರ ಮಂಡಲಿ ಯವರು ಕೆಲಸಗಳನ್ನು ನಡೆಸಿದರೂ ಅವರ ಕೆಲಸಗಳನ್ನು ಕುಂಠಿತಗೊಳಿಸುವ ದೃಷ್ಟಿಯಿಂದ ಮತ್ತೊಂದು ಆಜ್ಞೆಯನ್ನು ಹೊರಡಿಸಿ, ಮಂಡಲಿಯವರು ಕೆಲಸ ಕಾರ್ಯಗಳನ್ನು ಮಾಡದೇ ಇರುವ ರೀತಿಯಲ್ಲಿ ಸರ್ಕಾರದವರು ಮಾಡುವುದಕ್ಕೆ ಸಾಧ್ಯವಿದೆ. ಇಂಥ ಒಂದು ವಿಧಿಯನ್ನು ತಾವು ಅಳವಡಿಸಿಕೊಂಡಿದ್ದೀರಿ.

In amendment of Section 24 Sub-section (2) it is stated, The Board shall not execute any housing scheme or labour housing scheme unless the same has been sanctioned by the State Government. ಬೋರ್ಡಿ ನವರಿಗೆ ಒಂದು ಕಾರ್ಯಕ್ರಮವನ್ನು ಹಚ್ಚಿ, ಅದರ ಪ್ರಕಾರ ಮಾಡಿ ಎಂದರೆ, ಮಾಡುತ್ತಾರೆ. ಅವರೇ

ಸಂಸ್ಥೆಯಿಂದ ಕೆಲವು ಕಾರ್ಯಕ್ರಮಗಳನ್ನು ರೂಪಿಸಿಕೊಂಡರೆ, ಅದನ್ನು ಮಾಡಲಿಕ್ಕಾಗುವುದಿಲ್ಲ. ಇದಕ್ಕೆ ನೀವು ಮಂಜೂರಾತಿಯನ್ನು ನೀಡುವ ಹಾಗಿಲ್ಲ. ಎಲ್ಲಾ ಮಂಜೂರಾತಿಯನ್ನು ನಿಮ್ಮಿಂದ ಪಡೆದು ಅವರ ಕೆಲಸ ಮಾಡಬೇಕು ಎಂದರೆ, ಆ ಬೋರ್ಡು ಏಕೆ ಬೇಕು ? ನೀವು ಪಿ. ಡಬ್ಲ್ಯೂ. ಡಿ. ಯಲ್ಲೇ ಕೆಲಸಗಳನ್ನು ಮಾಡಿಸುವಂತೆ ಮಾಡಬಹುದು. ಇದು ನಿಮಗೂ ಸುಲಭವಾಗುತ್ತದೆ.

ಇನ್ನು ಹೌಸಿಂಗ ಕಮೀಷನರ್‌ರನ್ನು ತಾವೇ ನೇಮಕ ಮಾಡುತ್ತೀರಿ, ಇಲ್ಲಿ ಬೋರ್ಡಿನ ಚೇರ್ಮನ್‌ರು ನೌಕರರ ಒಂದು ರಜೆಯನ್ನು ಮಂಜೂರು ಮಾಡುವುದಕ್ಕೂ ಅವಕಾಶವಿಲ್ಲ. ಇಂಥ ಒಂದು ತಿದ್ದುಪಡಿ ಯನ್ನು ತಾವು ತಂದಿರತಕ್ಕದ್ದು ಸಾಧುವಾದುದು ಅಲ್ಲ.

In clause 10 sub-section (4) it is stated "The State Government may, from time to time grant, leave of absence for such period as it thinks fit to the Housing Commissioner, the Chief Engineer and the Secretary. A copy of every order granting such leave shall also be communicated to the Chairman".

ಒಬ್ಬ ಅಧ್ಯಕ್ಷ ಅಲ್ಲಿ ಇರುತ್ತಾನೆ, ಅವನ ಕೈಕೆಳಗೆ ಒಬ್ಬ ಕಮಿಷನರ್, ಚೀಫ್ ಇಂಜಿನೀಯರ್ ಮತ್ತು ಸೆಕ್ರೆಟರಿ ಇರುತ್ತಾರೆ. ಇವರು ಅಧ್ಯಕ್ಷರ ಕಲ್ಪನೆಯಂತೆ ಕೆಲಸ ಮಾಡಿಕೊಂಡು ಹೋಗುತ್ತಾರೆಯೋ ಎನ್ನುವುದು ಗೊತ್ತಾಗುವುದಿಲ್ಲ. ಏಕೆಂದರೆ ಇಲ್ಲಿ ಅಧ್ಯಕ್ಷರು ಹಿರಿಯರೇ, ಅಥವಾ ಕಮೀಷನರ್ ಹಿರಿಯರೇ ಅಥವಾ ಚೀಫ್ ಇಂಜಿನಿಯರ್ ಹಿರಿಯರೇ ಎನ್ನುವುದನ್ನು ತಿಳಿಸಿಲ್ಲ. ಮಂಡಲಿಯ ಅಧ್ಯಕ್ಷರು ಎಲ್ಲಾ ಅಧಿಕಾರಿಗಳಿಗಿಂತಲೂ ಹಿರಿಯರು ಎನ್ನುವುದಾದರೆ, ಅವರಿಗೆ ಪರಮಾಧಿಕಾರ ಇರುತ್ತದೆ. ಮಂಡಲಿಯ ನೌಕರರು ಕಮೀಷನರ್ ಅವರಿಂದ ರಜೆಯನ್ನು ಪಡೆದು ಹೋಗುವುದಾದರೆ, ಹೌಸಿಂಗ್ ಕಮೀಷನರ್ ಮತ್ತು ಕಾರ್ಯದರ್ಶಿ ಚೀಫ್, ಇಂಜಿನಿಯರ್ ಅವರು ಸರ್ಕಾರದಿಂದ ರಜೆ ವಗೈರೆಯನ್ನು ಪಡೆದು ಹೋಗುವುದಾದರೆ, ಅಧ್ಯಕ್ಷರಿಗೂ, ಹೌಸಿಂಗ್ ಕಮಿಷನರಿಗೂ ಯಾವ ಸಂಬಂಧ ಇರುತ್ತದೆ ? ಇಲ್ಲಿ ಒಂದು ಉದಾಹರಣೆಯನ್ನು ತೆಗೆದುಕೊಳ್ಳಬಹುದು. ತಾಲ್ಲೂಕು ಬೋರ್ಡಿನಲ್ಲಿ ಒಂದು ಪ್ರಾವಿಷನ್ ಇದೆ. ಅದರ ಪ್ರಕಾರ ಪ್ರೆಸಿಡೆಂಟ್ ಅಡ್ಮಿನಿಸ್ಟ್ರೇಷನ್ ಹೆಡ್, ಇಂಥ ಒಂದು ಸಣ್ಣ ಪವರ್ ಇದೆ. ಅಲ್ಲಿ ಬಿ. ಡಿ. ಓ. ಹೇಳುತ್ತಾನೆ, ಯಾವ ಕಾಗದ ಪತ್ರವೂ ತಮ್ಮ ಮುಖಾಂತರ ಅಲ್ಲದೆ ಅಧ್ಯಕ್ಷರಿಗೆ ಹೋಗತಕ್ಕದ್ದು ಅಲ್ಲ ಎಂದು. ಅಧ್ಯಕ್ಷರಿಗೂ ಇದಕ್ಕೂ ಏನೂ ಸಂಬಂಧವಿಲ್ಲ ಎಂದು ಹೇಳುತ್ತಾನೆ. ಯಾರೂ ಅವರ ಜೊತೆಗೆ ಮಾತನಾಡಬಾರದು, ನಾನು ಸರ್ಕಾರದ ಪ್ರತಿನಿಧಿ, ಪ್ರೆಸಿಡೆಂಟರಿಗೂ ನನಗೂ ಏನೂ ಸಂಬಂಧವಿಲ್ಲ ಎಂದು ಹೇಳುತ್ತಾನೆ. ಇಂಥ ಒಂದು ಪ್ರವೃತ್ತಿ ಅಲ್ಲಿ ಬರುತ್ತಿದೆ. ಅಧ್ಯಕ್ಷರಾದವರಿಗೆ ಸ್ವಲ್ಪವಾದರೂ ನಿಯಂತ್ರಣ ಮಾಡತಕ್ಕ ಅಧಿಕಾರ ಇಲ್ಲದೆ ಹೋದರೆ ಖಂಡಿತವಾಗಿಯೂ ಒಬ್ಬ ಜವಾನನೂ ಅವರ ಮಾತನ್ನು ಕೇಳುವು ದಿಲ್ಲ. ಇಂಥ ಪರಿಸ್ಥಿತಿಯನ್ನು ನೀವು ಮಾಡಬೇಡಿ. ಅಧ್ಯಕ್ಷರು ಅಂದ ಮೇಲೆ ಅವರಿಗೆ ಸ್ಥಾನಮಾನ ಇರಬೇಕು, ಪರಮಾಧಿಕಾರ ಇರಬೇಕು. ಕಮೀಷನರ್, ಕಾರ್ಯದರ್ಶಿ ಇವರ ಕೈಕೆಳಗೆ ಕೆಲಸ ಮಾಡತಕ್ಕ ವ್ಯವಸ್ಥೆ ಇರಬೇಕು. ಇಲ್ಲದೆ ಹೋದರೆ ಯಾವ ಗೌರವವೂ, ಪ್ರತಿಷ್ಠೆಯೂ ಆ ಮಂಡಲಿಯ ಅಧ್ಯಕ್ಷರಿಗೆ ಅಲ್ಲಿ ಇರುವುದಕ್ಕೆ ಸಾಧ್ಯವಿಲ್ಲ. ತಾವು ತಂದಿರತಕ್ಕ ತಿದ್ದುಪಡಿ ಅಧ್ಯಕ್ಷರ ಸ್ಥಾನಕ್ಕೆ ಭೂಷಣವಲ್ಲ. ಇದರ ಜೊತೆಗೆ ತಾವು ಅಧ್ಯಕ್ಷರ ಸ್ಥಾನವನ್ನು ಬಹಳ ಕನಿಷ್ಟ ಮಟ್ಟಕ್ಕೆ ಇಳಿಸುವುದಕ್ಕೆ ಹೊರಟಿದ್ದೀರಿ. ಇಂಥ ಒಂದು ಸ್ಥಾನಕ್ಕೆ ಯಾರೇ ಮರ್ಯಾದೆ ಇಟ್ಟುಕೊಂಡಿರತಕ್ಕ ವ್ಯಕ್ತಿ ಕೂತುಕೊಳ್ಳುವುದಕ್ಕೆ ಹೋಗುವುದಿಲ್ಲ. ಮಂಡಲಿಯನ್ನು ಬೇಡದಿದ್ದರೆ ರದ್ದುಮಾಡಿ. ಮಂಡಲಿಯ ಮೇಲೆ ಸರಕಾರ ಪರಮಾಧಿಕಾರ ಇಟ್ಟು ಕೊಳ್ಳುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ ಎಂಬುದು ನನ್ನ ಸಂದೇಹ. ಜೊತೆಗೆ ಇನ್ನೊಂದು ಕೆಲಸ ಇಲ್ಲಿ ಮಾಡಿದ್ದಾರೆ. ೨೦೦ ರೂಪಾಯಿ ಮೇಲೆ ಸಂಬಳವಿರುವ ಯಾರನ್ನಾದರೂ ನೇಮಕ ಮಾಡಿಕೊಳ್ಳಬೇಕಾದರೆ ಪಿ.ಎಸ್.ಸಿ. ಕೇಳಿ ಮಾಡಿಕೊಳ್ಳಬೇಕೆಂದು ತಿಳಿಸಿದ್ದಾರೆ. ಇದೇಕೆ ಹೀಗೆ ಮಾಡಿದ್ದಾರೆ ? ಪಿ.ಎಸ್.ಸಿ. ಯನ್ನು ಏಕೆ ಕೇಳಬೇಕು ? ನಮ್ಮ ರಾಜ್ಯದಲ್ಲಿ ಇಂಥ ಸ್ವಾಯತ್ತ ಸಂಸ್ಥೆಗಳಿವೆ, ಕೆ.ಎಸ್.ಇ.ಬಿ. ಕಾರ್ಪೊರೇಷನ್ ಮುಂತಾದ ಮಂಡಲಿಗಳಿವೆ. ಅಲ್ಲಿ ಕೂಡ ಎಲ್ಲಾ ನೇಮಕಗಳನ್ನು ಪಿ.ಎಸ್.ಸಿ. ಮೂಲಕ ಮಾಡಬಹುದಾಗಿತ್ತು ಅಲ್ಲಿ ಹಾಗೆ ಮಾಡದೆ ಇಲ್ಲಿ ಮಾತ್ರ ಪಿ.ಎಸ್.ಸಿ. ಮೂಲಕ ನೇಮಕ ಮಾಡಿಕೊಳ್ಳಬೇಕು ಎಂದು ತಿಳಿಸಿರು ವುದೇಕೆ ? ಇದರಿಂದ ಈ ಬೋರ್ಡಿಗೇನು ಅಧಿಕಾರ ಉಳಿದಿದೆ ? ಈ ರೀತಿ ಹಂತ ಹಂತವಾಗಿ ಕೊಲೆ ಮಾಡುವ ಪ್ರಯತ್ನ ಬಿಡಿ. ನಿಜವಾಗಿ ಹಿಂದುಳಿದವರಿಗೆ ಇಲ್ಲಿ ಸ್ಥಾನ ಮೀಸಲಿಡಬೇಕು, ಅವರನ್ನು ನೇಮಿಸಿ ಅವರಿಗೆ ವಿಶೇಷ ಸೌಲತ್ತು ಕೊಡಬೇಕು ಎಂದು ಇಲ್ಲಿ ಅವಕಾಶ ಮಾಡಿ ತಿದ್ದುಪಡಿ ತಂದಿದ್ದಾರೆ. ಇದನ್ನು ಮಾಡುವಾಗ ಹಿಂದೆ ಸಚಿವರಾಗಿದ್ದ ಶ್ರೀ ಬಿ. ಬಸವಲಿಂಗಪ್ಪನವರು ಒಂದು ಆಜ್ಞೆ ಮಾಡಿದ್ದರು. ಏನೆಂದರೆ

ಯಾವುದೇ ಒಂದು ಜಾತಿಯವರಿಗೆ ಹೌಸಿಂಗ್ ಬೋರ್ಡ್ ಅಕ್ಕಪಕ್ಕದಲ್ಲಿ ಮನೆ ಅಥವಾ ನಿವೇಶನ ಕೊಡಬಾರದು ಎಂದು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಕೆಲವರು ಟೀಕೆ ಮಾಡಿದರು. ಇವತ್ತು ಹಳ್ಳಿ ಅಥವಾ ಪೇಟೆಯಲ್ಲಿ ಬೇರೆ ಬೇರೆ ಜನಾಂಗಕ್ಕೆ ಬೇರೆ ಬೇರೆ ಕೇರಿಯಿದೆ, ಇದನ್ನು ಮುರಿಯಬೇಕಾಗಿದೆ. ಬೆಂಗಳೂರಿನಲ್ಲಿ ಜಯನಗರ, ಮಲ್ಲೇಶ್ವರ ಮುಂತಾದ ಕಡೆಗಳಲ್ಲಿ ನೋಡಬಹುದು, ಕೆಲ ಜಾತಿಯವರು ಒಂದು ಕಡೆ ಸಾಮೂಹಿಕವಾಗಿ ವಾಸಮಾಡುತ್ತಿರುವುದನ್ನು, ಇದನ್ನು ಹೋಗಲಾಡಿಸಲು ಇಂದು ಗ್ರಾಮಾಂತರಗಳಲ್ಲಿ ಮತ್ತು ನಗರಗಳಲ್ಲಿ ವ್ಯವಸ್ಥೆ ಮಾಡಿ. ನಗರ ಪ್ರದೇಶದಲ್ಲಿ ವಿದ್ಯಾವಂತರು ಎಲ್ಲಾ ವರ್ಗದವರೂ ಇರುವರು. ಅವರು ಅನ್ಯೋನ್ಯವಾಗಿ ಸಂಬಂಧ ಬೆಳೆಸಿ ಜೀವನ ಮಾಡಲು ಅಲ್ಲಿ ಸರಿಯಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ.

ಶ್ರೀ ಜೆ. ಎಸ್. ಅಮ್ಮಣ್ಣನವರು ;– ನಾನು ವೆಜಿಟೇರಿಯನ್. ನನಗೆ ಕೋಳಿ ಮಾಂಸದ ವಾಸನೆ ಬಂದರೆ ಏನು ಮಾಡಬೇಕು ?

ಶ್ರೀ ಕಾಗೋಡು ತಿಮ್ಮಪ್ಪ ;– ಕೋಳಿ ಒಂದು ಸಂಪತ್ತು, ಅದನ್ನು ಸಾಕಿದರೆ ಹಣ ಸಿಕ್ಕುತ್ತದೆ. ಅದನ್ನು ತಿನ್ನುವವರೇ ಸಾಕಬೇಕೆಂದೇನೂ ನಿಯಮವಿಲ್ಲ ಇಲ್ಲ. ಈ ದಿವಸ ಏನಾಗಿದೆಯೆಂದರೆ ಜಾತಿಯ ಆಧಾರದ ಮೇಲೆ ಮತ್ತು ಕಸಬು ಬೆಳೆದಿರುವ ಹಾಗೆ ದಂಧೆಗಳು ಸಹ ಇವೆ. ಮೀನು ವ್ಯಾಪಾರ ಮಾಡುವವರೇ ಬೇರೆ ಇರಬೇಕು, ಚರ್ಮದ ಕೆಲಸ ಮಾಡುವವರೇ ಬೇರೆ ಇರಬೇಕು, ಎಂದರೆ ಹೇಗೆ ? ಬೇರೆಯವರು ಏಕೆ ಆ ಕೆಲಸ ಮಾಡಬಾರದು ? ಸಂಬಳ ಸರಿಯಾಗಿ ಸಿಕ್ಕಿದರೆ ಎಲ್ಲರೂ ಹೋಗಿ ಕೆಲಸ ಮಾಡುವರು. ಜಾಡಿಮಾಲಿಗೆ ೫೦೦ ರೂಪಾಯಿ ಸಂಬಳ ಕೊಡಿ, ಎಲ್ಲರೂ ಆ ಕೆಲಸ ಮಾಡಲಿ, ಎಲ್ಲಾ ಜನಾಂಗದವರೂ ಜಾಡಮಾಲಿ ಕೆಲಸ ಮಾಡಲಿ. ಹರಿಜನರೇ ಏಕೆ ಆ ಕೆಲಸ ಮಾಡಬೇಕು ? ಈಗ ಗೃಹನಿರ್ಮಾಣ ಮಂಡಲಿ ಮನೆ ಕಟ್ಟುವ ಯೋಜನೆ ಹಾಕಿಕೊಂಡಿದೆ. ಅದನ್ನು ಕಾರ್ಯರೂಪಕ್ಕೆ ತರುವಾಗ ಒಂದೇ ಜನಾಂಗದವರು ಒಂದೆ ಕಡೆ ಇರುವಂತೆ ಏಕೆ ಅವಕಾಶ ಮಾಡಿದರು ? ಹರಿಜನರು, ಹಿಂದುಳಿದವರು, ಗಿರಿಜನರು ಮುಂತಾದವರಿಗೆ ಅವರನ್ನು ನೇಮಕ ಮಾಡುವಾಗ ವಿಶೇಷ ಸೌಲತ್ತು ಕೊಡಬೇಕೆಂದು ಕಡ್ಡಾಯ ಮಾಡುತ್ತಿದ್ದೀರಿ. ಹಾಗೆಯೇ ಅಕ್ಕಪಕ್ಕದಲ್ಲಿ ಬೇರೆ ಜಾತಿಯವರು ಇರುವುದಕ್ಕೆ ಅವಕಾಶ ಮಾಡಬೇಕಾಗಿತ್ತು. ಇದರ ಬಗ್ಗೆ ಒಂದು ನಿಯಮವನ್ನೇಕೆ ಮಾಡಿಲ್ಲ ? ಇರುವ ಅಧಿಕಾರವನ್ನು ಕಿತ್ತುಹಾಕುವುದಕ್ಕೆ ಸರಕಾರಕ್ಕೆ ಮನಸ್ಸು ಬರುವುದು. ಹಾಗಿರುವಾಗ ನಿಜವಾಗಿಯೂ ಇನ್ನೂ ಉತ್ತಮವಾದ ಕೆಲಸ ಮಾಡಲು ಏಕೆ ಮನಸ್ಸು ಬರುವುದಿಲ್ಲ ? ಅದಕ್ಕೆ ಒಂದು ಉದಾಹರಣೆ ಹೇಳಿದೆ. ಇದನ್ನು ಪರಿಶೀಲಿಸಿ. ಮಂಡಲಿಯ ಅವ್ಯವಹಾರ ಸರಿಪಡಿಸಿ ಅದು ಉತ್ತಮ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ತಿದ್ದುಪಡಿ ತಂದಿದ್ದೇವೆಂದು ಹೇಳುವದು ಸತ್ಯಕ್ಕೆ ದೂರವಾದ ಮಾತು. ಮುಖ್ಯವಾಗಿ ಕಾಂಗ್ರೆಸ್ಸಿಗಿರುವ ಉದ್ದೇಶ ಸಾಧನೆಗೆ ಈ ಕೆಲವು ತಿದ್ದುಪಡಿಗಳನ್ನು ತಂದಿದ್ದೀರಿ ಎಂದು ಸರಕಾರದ ಮೇಲೆ ಅಪಾದನೆ ಮಾಡುತ್ತಿದ್ದೇನೆ. ಆದುದರಿಂದ ಈಗಲಾದರೂ ದಯೆಯಿಟ್ಟು, ಈ ಮಸೂದೆಯನ್ನು ವಾಪಸು ಪಡೆಯುವುದಕ್ಕೆ ಮನಸ್ಸು ಮಾಡಿ, ಹಾಗೆ ಮಾಡಿ ಸಮಗ್ರವಾದ ತಿದ್ದುಪಡಿಯನ್ನು ತನ್ನಿ. ಹಾಗೆ ಮಾಡಿದರೆ ಖಂಡಿತ ಅದಕ್ಕೆ ಒಪ್ಪಿಗೆ ಕೊಡುತ್ತೇವೆ.

ಈ ವಿಧೇಯಕವನ್ನು ಶ್ರೀ ರಾಚಯ್ಯನವರು ಮಂಡಿಸಿದರು. ಮಂಡಿಸಲು ಸಂಬಂಧಪಟ್ಟ ಸಚಿವರು ಹಾಜರಿರಲಿಲ್ಲ. ಅಧ್ಯಕ್ಷರು ಶ್ರೀ ರಾಚಯ್ಯನವರಿಗೆ ಮಂಡಿಸಲು ಅವಕಾಶ ಕೊಟ್ಟರು. ಶ್ರೀ ರಾಚಯ್ಯನವರು ವಿಧೇಯಕದ ಉದ್ದೇಶವನ್ನು ವಿವರಿಸುವಾಗ ಮೂಲಭೂತವಾಗಿ ತಿದ್ದುಪಡಿ ತಂದಿರುವುದರ ಉದ್ದೇಶವನ್ನು ವಿವರವಾಗಿ ಹೇಳಲಿಲ್ಲ. ಅವರು ಹೇಳಿದ ಉದ್ದೇಶವೇ ಬೇರೆ, ಮಸೂದೆಯಲ್ಲಿ ನಮೂದಾಗಿರುವುದೇ ಬೇರೆ. ಸಂಬಂಧಪಟ್ಟ ಸಚಿವರು ತಿದ್ದುಪಡಿ ಮಂಡಿಸಿದ ದಿವಸವೇ ಮಂಡಿಸುವ ಉದ್ದೇಶವನ್ನು ಸರಿಯಾಗಿ ವಿವರಿಸಿದ್ದರೆ ನಮ್ಮ ಅಭಿಪ್ರಾಯವನ್ನು ಅಂದೇ ತಿಳಿಸಲು ಸಾಧ್ಯವಾಗುತ್ತಿತ್ತು.

ಉಪಾಧ್ಯಕ್ಷರು ;– ಕೆಲವು ಔಟ್‌ಲೈನ್ಸ್ ಕೊಟ್ಟಿದ್ದರು.

ಶ್ರೀ ಕಾಗೋಡು ತಿಮ್ಮಪ್ಪ ;—ಮಾನ್ಯ ರಾಚಯ್ಯನವರು, ಉದ್ದೇಶಗಳನ್ನು ವಿವರಣೆ ಮಾಡಿ ಹೇಳುತ್ತಾ ಇದರಲ್ಲಿ ಬಂದಿರತಕ್ಕ ಉದ್ದೇಶಗಳನ್ನು ಬಿಟ್ಟು ಬೇರೆ ಉದ್ದೇಶಗಳನ್ನು ಹೇಳಿದ್ದಾರೆ. ಆ ದೃಷ್ಟಿಯಿಂದ ಈ ಉದ್ದೇಶ ಸಾಧನೆ ಮಾಡಬೇಕು ಎಂದು ಏನು ಸರ್ಕಾರದವರ ಹೊರಟಿದ್ದಾರೆ, ಇದರಿಂದ ಏನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ಖಂಡಿತ ಸಾಧನೆ ಮಾಡುವುದಾದರೆ, ಇದಕ್ಕೆ ಸಮಗ್ರವಾದ ತಿದ್ದುಪಡಿ ತಂದು ಆಗ ಉದ್ದೇಶ ಸಾಧನೆ ಮಾಡಬೇಕೇ ಹೊರತು ಅಲ್ಲೊಂದಿಷ್ಟು, ಇಲ್ಲೊಂದಿಷ್ಟು ತಿದ್ದುಪಡಿ ತರುವ ಮುಖಾಂತರ ಯಾವುದೇ ಉದ್ದೇಶ ಸಾಧನೆ ಮಾಡುವುದಕ್ಕಾಗುವುದಿಲ್ಲ. ಈ ಮಸೂದೆಯನ್ನು ವಾಪಸ ಪಡೆಯಬೇಕು ಎಂದು ಮಾನ್ಯ ಸಚಿವರಲ್ಲಿ ಕೇಳಿ ಕೊಳ್ಳುತ್ತೇನೆ. ಮಸೂದೆಯನ್ನು ವಾಪಸ ಪಡೆ

ಯುವದಕ್ಕೆ ಸಾಧ್ಯವಾಗದೇ ಇದ್ದರೆ, ಕೆಲವು ಮೂಲಭೂತ ವಿಧಾನಗಳಿಂದ ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದರಲ್ಲೂ ಕೂಡ 'ಪ್ಲೆಷರ್ ಆಫ್ ದಿ ಗವರ್ನಮೆಂಟ್' ವಿಪುಲವಾದ ಚರ್ಚೆ ಯಾಗಿದೆ. ಇಂಥ ಪ್ರವೃತ್ತಿಯನ್ನು ಸರ್ಕಾರ ಯಾವಾಗಲೂ ಮಾಡುವುದಕ್ಕೆ ಪ್ರಯತ್ನ ಮಾಡಬಾರದು. ವಿಪುಲ ಚರ್ಚೆ ನಡೆದಿದೆ. ಮಸೂದೆಯನ್ನು ವಾಪಸ ಪಡೆದಂಥ ಪ್ರಸಂಗ ಇದೆ. ಹಾಗೆ ಇದ್ದಾಗ್ಗೆ ಬದಲಾವಣೆ ಮತ್ತೆ ಮಾಡಿದ್ದಾದರಾ ಎಂದು ನೋಡಿದರೆ ಯಾವ ಬದಲಾವಣೆ ಮಾಡದೆ ಯಥಾವತ್ತಾಗಿ ಮಾಡಿದ್ದೀರಿ. ಆದ್ದರಿಂದ ಸರ್ಕಾರದ ರೀತಿ ಏನು ಎಂದು ಗೊತ್ತಾಗುತ್ತಾ ಇಲ್ಲ. ಆ ದೃಷ್ಟಿಯಿಂದ ಕೆಲವು ಬದಲಾವಣೆಗಳು ನನ್ನ ಮನಸ್ಸಿಗೆ ಬಂದಿದ್ದುವು. ಇಂಥ ಸರ್ಕಾರ ಕಪಿಮುಷ್ಟಿಯಿಂದ ತಂದಿರುವುದರಿಂದ, ಅದಕ್ಕೆ ಬದಲಾವಣೆಗೆ ಒಪ್ಪುವುದಕ್ಕೆ ಸಾಧ್ಯವಾಗದೇ ಇರುವುದರಿಂದ, ದಯವಿಟ್ಟು ಅದನ್ನು ವಾಪಸ ಪಡೆಯಬೇಕು ಎಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

Sri B. BASAVALINGAPPA (Uttarahalli):—Mr. Deputy Speaker Sir, I have been listening to the arguments advanced by many of the Hon. members of this House on this amending Bill. Since I was the author of this amending Bill, I thought, it was my duty to reply some of the objections raised by the hon member. First of all, some of the Hon. members have been pleading that the Bill has to be withdrawn. The first argument advanced is that this amending Bill is intended for ousting certain individual who was occupying the office of the Chairmanship of the Board. This is completely incorrect. This Government took charge in the month of March 1972. We never thought of discontinuing the Chairman for over 1½ years. Had we carried any prejudice against the Chairman of the Board, we could have thought of removing him immediately after we took charge of the administration. This we never did. We told him that he should carry out the programmes of the party-whether he belonged to Cong (O) or Cong (R) or any other party. He continued to function in his own way contrary to the wishes of the party.

I would like to submit that party coming to power will have the option to have its own men to function as Chairman of the Boards or the Committees to implement the programmes of the party. I do not think it is the claim of any other party to become the Chairman of the Board. As a matter of tradition of democracy, the party contemplates the programmes and it is responsibile for answering the people for the implementation of the programmes of the party and it is the duty of the party to employ their own man. I think my friends will be knowing the functioning of the democracy in USA and UK whenever a particular comes to power. They appoint their own men to carry out their progammes. This is the tradition of the democracy.

Mr. Deputy SPEAKER:—Including even the Overseas Ambassadors --

Sri. B. BASVALINGAPPA:—Yes. When the Cong (O) went out of office, I think, it was the duty of Chairman or any person who

occupies the Chairmanship, of the Board or Committee to have resigned and gracefully quit the place. But this gentleman never quit the office, he continued. I had told him to implement the programme of our party, but he never cared to do so. I tolerated him for over 1½ years as a Minister. Had I just entertained the idea that he should go, I would have issued him the notice much earlier, I never did it. What is the charge now levelled? This amending Bill is not meant for ousting an individual but is has been brought forward with a view to supplement what is deficient in the Act. The affairs of the Board were inquired into by two inquiry officers and they have submitted their reports—one committee was appointed by the GAD and another by a Deputy Secretary Sri Revadi an eminent civilian. He gave a detailed report as to the working of the Housing Board. He has indicated in his report several items of mis application and mal administration like lack of control over the subordinates and the mis-use of funds. I may he permitted to read out one or two items relating to the irregularites in respect of P.W.D. of the Housing Board.

1. The works are entrusted to the contractors for execution in a number of cases pending sanction of competent authority to the concerned estimates in contravention of the provisions of paras 211 and 212 of the K. P. W. D. code and para 314 of the K. P. W. code.

2. In several cases, the lowest rates received have not been accepted by the Board or even if accepted, the works are not executed by the concerned contractors at these rates. No negotiations are also conducted to reduce the rates as contemplated in para 182 of P. W. D. Code, Volume-I wherever necessary.

3. In majority of cases the works entrusted to the original contractors have been stopped in the middle and the balance of works have been entrusted to other agencies without taking proper action to penalise the contractors and to recover the extra cost as contemplated in clause 3(a) and (c) of the Regular Agreement Form. No action is also taken for penalising the contractors for inordin te delay in completion of the work as required by clause 2 of the agreement.

4. Steel is issued to the contractors free of cost as per Schedule-B of the agreement, although this procedure is detrimental to the interest of the Board, as steel so issued is utilised by the contractors for their own items of works. Thus the excess quantity of steel issued is not returned by them.

5. The contractors Ledger has not been therefore posted correctly exhibiting the value of the materials issued and the cost to be recovered from their bills. Thus there is no control over

the recovery of the amounts due from contractors on account of issue of such materials. As a result of this large amounts have been shown as outstanding under Misc. P. W. D.-Advances. The procedure followed is therefore highly irregular.

6. The Register of works which is required to be maintained under the provisions of paras 284 and 285 of M. P. W. D. Code has not been properly posted by sub-heads including the suspense heads etc. The postings are found to be very confusing in as much as monthly totals uptodate totals are not properly struck. Thus the total progress of the work under the sub-heads, suspense heads etc., is not properly indicated.

7. Purchase Register, Misc. P. W. D. Advance Register and Deposit Register maintained are either found incomplete or they are not maintained at all as required by pras 348, 361 and 401 of M. P. W. A. Code, Volume-I. The stock registers maintained are also found to be incomplete and in case of No. 1 Division, Bangalore, the stock verification of steel carried out by the Assistant Engineer on 30-9-72 showed that I. R. C. fabricated steet worth Rs. 5,429.76 stated to have been used on S. I. S. H. Buildings, Mandya. It has not been traced out for more than five years with reference to the concerned itmes of work on which the above steel is utilised.

8. The bills prepared are also found to be incomplete and the duplicate copies of the bills are also written up in pencil and the Memorandum, Part-II has not been filled in. As the previous bills constitute the basis for preparation of the subsequent bills, it is highly irregular to write these bills in pencil or to keep them incomplete, as the correctness of such subsequent bills cannot be relied upon in the absence of correct and uptodate entries in the previous bills.

From the above facts it is clear that the state of accounts in the P. W. D. Divisions of Mysore Housing Board is very unsatisfactory.

Subsidised Housing Scheme over to Local Bodies

" As could be seen from this statement the Local Bodies have not paid the amount of instalments due amounting to Rs 81,531 to the Mysore Housing Board on the due dates.

Amounts outstanding under Miscellaneous Advances of P.W.D. Divisions of the Mysore Housing Board.

(a) The Executive Engineers of the PWD Divisions of the Mysore Housing Board have issued materials like steel and cement

to the contractors on credit basis irrespective of the fact whether there was any provision to that effect in the aggrement or not contrary to the provisions of paras 238 and 239 of MPWA Code The amounts due on account of issue of such materials should have been debitcd to the account of the concerned contractor in the contractors Ledger as per instructions laid down in paras 297 to 303 of MPWA Code. The procedure of debiting the cost of these materials to the Miscellaneous PWD Advances is highly irreguar being contrary to the provisions of Note-1 below para 355 of the said Code and this has not enabled the Executive Engineers to recover such amounts from their bills while passing them for payments. The total amount outstanding against December 1972 is indicated below.

Total Rs. 60,09,419

These are some of the irregularities pointed out. Regular accounts have not been maintained. The Report on the Finance and Accounts of the Housing Board covers about 43 pages. I am skipping over to mention some of the items.

The following Returns have not been furnished by the Board to Government as required by Section, 19 and 20 of the Mysore Housing Board Act.

i) Establishment Shedule in Form No. III

ii) Quarterly Progress Report under Subsidised Housing Schemes

iii) Annual Progress Report under several schemes;

iv) Demand, collection and balance rents and loans;

v) Audit Report vide section 55 of the Mysore Housing Board Act.

These are some of the irregularities found as per the inspection report of the Financial Adviser. In all these, crores of rupees, amounting to more than Rs. 21 crores, which were taken as advances from the public, have not been posted in proper ledgers. There was complete collapse of the whole administration. We thought of issuing notice to the Housing Board under Section 86 of the Housing Board Act. Perhaps you would like to know whether the Government had the powers to see that certain programmes are implemented, moneys invested in the Board could be expended according to law and the administration run by the Board could be corrected. I answer this question in the affirmative. The Government has powers to control the affairs of the Board. But what are the powers contemplated in the Karnaatka Housing Board Act? Very limited powers are there. Except under Section

86 of the Act, there are no powers vested in the Act to control the affairs of the Board. If the Board goes wrong or commits the Government to an expenditure eontrary to the provisions of the Act, there is no provisions in the old Act empowering the Government to question the functioning of the Board. Therefore, we issued a notice to the Board on the basis of the report referred to earlier. What is the reaction of the Chairman to it? He went to the Court and brought a stay order.

For the purpose of enlightening the public about the powers of the Government, I would like to read the relevant provision of the Act, namely, Section 86 of the Karnataka Housing Board Act, 1962, which is as follows

86. Default in performance of duty:—(1) If the State Government is satisfied that the Board has made default in performing any duty imposed on it by or under this Act, it may fix a period for the permance of that duty.

(2) If in the opinion of the State Government, the Board fails or neglects to perform such duty within the period so fixed for its performance, it shall be lawful for the State Government notwithstanding anythiug eontained in section 6, to supersede and reconstitute the Board in the prescribed manner.

3. After the supersession ot the Board and until it ts reconstituted, the powers, duties and functions of the Board under this Act, shall be carried on by the state Governmeut or by such Officer or Officers as the state Government may appoint for this purpose,

Before takiug action for superseding the Board under the law, it is provided that the Board should be given an opportunity of being heard. This is a provision of law. The Government decieded to take action under section 86 (1) of the Act, compelling the Board io perform the duties imposed on it under the Act within a certain period. This notice was taken to the High Court and there was a stay. I would like to question the propriety of such judicial interference in the executive functioning of the State.

Mr. Deputy SPEAKER :—Judiciary is our own creation.

Sri B. BASAVALINGAPPA :—It should know its limitations.

Mr. Deputy SPEAKER :—It is not proper to question it. There are three bodies—The Executive, Legislature and Judiciary. The functions of both the Judiciry and Executive are also very important and we must work harmony.

Sri B. BASAVALINGAPPA :—The three functionaries of the State are: the Executive, Legislature and the Judiciary. Each must know its limitations, powers and functions.

Now, section 86 empowers the Government to compel the Board to perform its functions under the Act. The notice is issued to explain why certain omissions or commissions are made and why within a certain period, performance should not be enforced. This is all that the notice contemplates. At this stage, whether there is any semi-judicial function is called for, whether it involves judicial interference, should be examined because after the issue of notice, we have got to give another notice to the entire Board for being heard. Only then, supersession comes in. So this second notice is not issued.

Mr. DEPUTY SPEAKER :—I want to tell the Hon. Member that what is encountered in the High Court may not be raised here. Though they may be bare facts, propriety should not be questioned. There should be clear demarcation which may respectfully be adhered, to.

Sri. BASAVALINGAPPA :— I understand the embarassment caused to the Chair. I feel that you should not put yourself to the embarassment because we have got to decide and know what are the functions of the judiciary and the executive. When the Government which is running the administration, is exercising its powers and functions under the Act, whether the judiciary can interfere with the functions and administration. At this rate administrstion cannot go on. With great respect, I submit that time has come when you have got to prescribe the functions of jndiciary and executive. The executive must discharge its functions and satisfy and carry out the pledges made at the time of election. After coming to power, the Government of the day has to take certain executive actions; and if the judiciary interfers with the administration and functions of the executive, then it is difficult to understand how the executive can function. Take for example this particular case. A notice was issued and it was stayed. A second notice was issued on the ground that the Housing Board violated section 33 of the Act. Section 33 of the Act provides for the sanction of certain projects and leases of the land by the Housing Board provided that the previous approval of the State Government shall be obtained in the case of purchase and acquisition of land worth more than Rs. 25,000 or leases for more than 5 years. Sir, this provision is very specific and if the Board wants to enter into the purchase of land worth more than Rs. 25,000 the previous sanction of the Government is essential and necessary. What has happened is, the Board entered into the purchase of land worth more than 17 lakhs of rupees without informing the Government. No sanction was taken. The Govern-

ment issued a notice why you have done this; and this is against the spirit of Section 33. Even that notice was stayed. How should the Government function? Should not Government called people to order if they violate provisions of an Act passed by this House? Should not the Board be called order if it violates the provisions of the Law applicable in that behalf? That is also stayed. So what happened? We are compelled to issue an Ordinance under the Legislative Powers vested in the Government. An Ordinance was issued. That was also stayed. An Ordinance cannot be stayed because it is the legislative function of the State Government. That cannot be stayed. What is stayed is the appointment of the Chairman. So, the other man, the Chairman continued in office. He continued in office till 9-3-1974. He completes his full term and he gets out without answering all these charges of omissions and commissions. Now my friends, you want to plead on his behalf?

Sri. T. R. SHAMANNA :—None of us are pleading on his behalf

Sri. BASAVALINGAPPA :—Let us make ourselves clear. We are not here to protect the interests of the Chairman of the Board. Our interest is to see that the powers given to the Board should not be taken away or snatched away by the Government That is made clear.

Sri T. R. SHAMANNA :—Where there are draw-backs, set them right. We are not pleading on behalf of the Chairman.

ಶ್ರೀ ಕಾಗೋಡು ತಿಮ್ಮಪ್ಪ :—ಮಾನ್ಯ ಬಸವಲಿಂಗಪ್ಪನವರು ಮಂತ್ರಿಗಳು ಆಗಿದ್ದಾಗ, ಇಂಥ ವಿಷಯಗಳನ್ನು ಸದನದ ಮುಂದೆ ಇಟ್ಟಿದ್ದರೆ ನಾವು ಅವರ ಜೊತೆಗೆ ಸೇರಿ ಅಂಥ ಅಪರಾಧಿಗಳನ್ನು ಶಿಕ್ಷೆ ಮಾಡುವುದಕ್ಕೆ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುವುದಕ್ಕೆ ಹಾಗೂ ಅದರ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವಿತ್ತು ಅವರು ಹೇಳಲಿಲ್ಲ.

Mr. DEPUTY SPEKER :—You have the support of the Members Mr. Basavalingappa.

Sri BASAVALINGAPPA :—A non-official who has no responsibility for any of lapses, financial as well as administrative, is let lose, is not controlled by the Act. How to control him? It is by such methods. Sir, in addition to all these things, what other things that have been done in the Housing Board?

Sir, more thau 1800 houses have been constructed in a place where people cannot go and occupy those houses Crores of rupees are spent on the coustruction of houses. Lands have been purchased at exhorbitant rates. Lands worth only Rs. 200--300 in remote places are purchased at the rate of Rs 20,000 or Rs. 30,000 per acre. By negotiation they have done It, They have not referred the matter to Government under section 33. They have not the approval of the Government for the purchase of the land. I would like to respectfully put a question.

Whether the Government should or should not interfere with such matters and control the affairs of the Housing Board. Now, even the allotment of houses, even such irregularities has been done and I do not want to go in detail because if the new Board is constituted than I think the affairs of the Housing Board may be alright. Now, the people who are placed as the Chairman and other members have no respect for law; they flout the provisions of the Act; they flout the orders and authorities of the Government. If the Government has no control over the Board, what else it could do? We will have to keep quiet silently and patiently watching the mis-deeds of the Housing Board, as we have done only this, *i. e.,* Just watching the mis-deeds of the Housing Board without rectifying what they have done. The successor Minister could not do anything under the present Aet. Therefore, an Ordinance has been promulgated.

My Hon. Friends raised certain objections about the inclusion of the word during the pleasure of the Government for amending section of the Act. It is not a new imposition. This word or this phrase has been included in all Acts, particularly in the City Improvement Trust Board Act, which is in existence since 1944. Why the Hon. Members, have not objected for that? The Hon. Members, Sri Shamanna was talking so much of democracy. What is democracy when people act like this with public funds. Is it democracy playing with public funds? Should we not have control over the public funds when it is being used to the disadvantage of the Board or to the people or to the Government? Should we not have control when they take undue advantage of the position? If the Chairman of the Board does not discharge his functions, his duties properly as per the Act, he has got to be removed, but If the Government does not have that power, the Government could only watch what he has been doing silently looking at the misdeeds of the Housing Board. The Housing Board has been doing such duties as construction of houses, carrying out the housing programmes incurring crores and crores of Rupees of expenditure and there is also an outstanding debenture of more than Rs. 21 Crores. Are we not hold the Chairman responsible? Should we allow that man to have a free hand with the public funds? Now, the Chairman is all powerful and the Board has nothing to do. It passes resolutions and quits after taking the Daily Allowance and Travelling Allowance. It is the Chairman who functions effectively and sits at the helm of affairs both for the administration as well as for finances. Therefore, we thought of bringing this Amending Bill. I do not want to take much of the time of the House because, I have stated in a nutshell what prompted the Government to take action to bring this Amending Bill to the existing Act so that the public funds could

be safeguarded and that the affairs of the Housing Board could be better managed and that the financial control is maintained firmly by the Government. I do not want to make much of the other provisions because the Hon. Minister is going to reply and now under the Amending Bill, the Commissioner will be a Government Servant against whom action *i. e.*, disciplinary action could be taken. This will enable to handle the finances as well as enter into the contracts and without his knowledge, and without the signature, nothing could move under the Amending Act. With a view to safeguard all the interests of the Board, this Amending Bill has been brought. I think the Hon. Members will agree for the passing of this Amending Bill without any further discussion. I think I have removed much of of the doubts raised by my Hon. Friend, Sri T. R. Shamanna, because, he always lives in the air of democracy. Is this democracy a free style wrestling? It is not so. It is a licensed wrestling it is not a free style wrestling. Now in a Board like this, where large funds are involved, it is the Government that is responsible to answer to this Hon. House. The Government has to keep control and it has got to post its own men, its Officers to man the affairs of the Board and see that the affairs of the Board are managed properly.

Sri S. BANGARAPPA :—My Hon. Friend just now mentioned that the Government can have the con rol if the Commissioner is a public servant. What I wanted to submit is, the Deputy Commissioner is the Commissioner of the Board, who is an I.A.S. Officer. The State Government connot have effective control over the I.A.S. Officers. They can only transfer the Officer and suggest to the Central Government to take action.

Sri B. BASAVALINGAPPA :—This Housing Commissioner need not necessarily be a Deputy Commissioner. He may be any Officer above that grade. Now, Sri, the Hon. Member has raised the question whether the Government can have effective control over the I.A.S. Officers. I would like to submit to this House that the I.A.S. Officers can be suspended on the spot under the I.A.S. Act. For taking disciplinary action, the Government has powers, but only for such dismissal, we have to refer to the Government of India.

ಶ್ರೀ ಫಿ. ಬೈರೇಗೌಡ (ವೇಮಗಲ್ಲು) :—ಮಾನ್ಯ ಆಧ್ಯಕ್ಷರೇ, ಕರ್ನಾಟಕ ಗೃಹನಿರ್ಮಾಣ ತಿದ್ದುಪಡಿ ಮಸೂದೆಯನ್ನು ಸಭೆಯಮುಂದೆ ನಮ್ಮ ಒಪ್ಪಿಗೆಗಾಗಿ ಇಟ್ಟಿದ್ದಾರೆ. ಸರಕಾರದವರು ಇದನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ಅವರು ಕಡ್ಡಾಯವಾಗಿ ವಾಪಸ್ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಕೂಡ ಮಾಡುತ್ತೇನೆ.

ನಾನು ಮಾತನಾಡುವುದಕ್ಕೆ ಹಿಂದೆ ಮಾತನಾಡಿದ ಮಾನ್ಯ ಬಸವಲಿಂಗಪ್ಪನವರು ಈ ಮಸೂದೆಯಲ್ಲಿ ಅವರೇ ತಯಾರಿಸಿದ್ದು ಈ ಮಸೂದೆಯಲ್ಲಿ, ಅಡಕವಾಗಿರತಕ್ಕ ಕೆಲವು ಪ್ರಾಮುಖ್ಯವಾದ ಅಂಶಗಳನು

ಅವರೇ ಈಗ ಸಭೆಯ ಮುಂದೆ ಇಟ್ಟಿದ್ದಾರೆ. ಹಾಗೆ ಅವರು ತಮ್ಮ ಅಭಿಪ್ರಾಯಗಳನ್ನು ಮಂಡಿಸುತ್ತ ಏನು ಹೇಳಿದರೆಂದರೆ ಯಾವ ಪಕ್ಷ ಅಧಿಕಾರಕ್ಕೆ ಬರುತ್ತದೋ ಆ ಪಕ್ಷ ತನ್ನ ಪಾಲಿಸಿಯ ಕಾರ್ಯಕ್ರಮಗಳನ್ನು ನೆರವೇರಿಸುವುದಕ್ಕೆ ಏನು ಬೇಕೋ ಅದನ್ನು ಮಾಡಬೇಕಾದ್ದು ಆ ಪಕ್ಷದ ಆಧ್ಯ ಕರ್ತವ್ಯ ಎಂದು ಹೇಳಿದ್ದಾರೆ. ನಾನು ಅವರು ಹೇಳಿದ್ದನ್ನು ಸ್ವಾಗತ ಮಾಡುತ್ತೇನೆ. ಆದರೆ ಏನು ಒಂದು ಈ ಬಿಲ್ಲನ್ನು ಮಂಡಿಸಿದ್ದಾರೆ ಇದರಲ್ಲಿ ಅಡಕವಾಗಿರತಕ್ಕ "ಸ್ಟೇಟ್‌ಮೆಂಟ್ ಆಫ್ ಅಬ್‌ಜೆಕ್ಟ್ಸ್ ಅಂಡ್ ರೀಜನ್ಸಿನಲ್ಲಿ" ತಿಳಿಸಿರುವುದಕ್ಕೂ ಮತ್ತು ಈಗತಾನೆ ಇಲ್ಲಿ ಆ ಬಸವಲಿಂಗಪ್ಪನವರು ಹೇಳಿದ್ದಕ್ಕೂ ಒಂಕ್ಕೊಂದು ಯಾವ ಸಂಬಾಧವೂ ಇರುವುದಿಲ್ಲ. ಈ ಸ್ಟೇಟ್‌ಮೆಂಟ್‌ನಲ್ಲಿ ಈ ತಿದ್ದುಪಡಿ ಮಸೂದೆಯನ್ನು ತರತಕ್ಕ ಉದ್ದೇಶ ಇಲ್ಲಿ ೧೨ ಜನ ಸದಸ್ಯರಿದ್ದರು. ಈ ಸಂಖ್ಯೆಯನ್ನು ೧೫ಕ್ಕೆ ಏರಿಸುವುದು ಒಂದು ಉದ್ದೇಶವೆಂದು ಹೇಳಿದೆ. ಹೀಗೆ ಹೆಚ್ಚಿಗೆ ಅಗತಕ್ಕ ಸದಸ್ಯರೇನಿದ್ದಾರೆ ಅವರು ಡಿ. ಸಿ. ದರ್ಜೆಯ ಜನರಿರಬೇಕೆಂದು ಹೇಳಿದೆ. ಆದರೆ ಈ ಜನರಿಗೆ ಮನೆಗಳನ್ನು ಕಟ್ಟತಕ್ಕ ಕೆಲಸದಲ್ಲಿ ಪಾಯ ಹಾಕುವುದಾಗಲಿ, ಗೋಡೆ ಕಟ್ಟುವುದಾಗಲಿ ಅಥವಾ ಗಾರೆ ಕೆಲಸ ಮಾಡುವುದಾಗಲಿ ಇಲ್ಲವೇ ರೂಫಿಂಗ್ ಹಾಕುವುದಾಗಲೀ ಏನಾದರೂ ಬರುತ್ತದೆಯೇ ಎಂದು ಕೇಳುವುದಕ್ಕೆ ಇಚ್ಛಿಸುತ್ತೇನೆ ? ಅವರಿಗೆ ಯಾರಿಗೂ ಈ ಕೆಲಸಗಳು ಗೊತ್ತಿಲ್ಲ. ಅವರೂ ಸಹ ಹಿಂದಿದ್ದ ೧೨ ಜನರಂತೆ ಆಗಾಗ್ಗೆ ಮೀಟಿಂಗುಗಳಿಗೆ ಬಂದು ಟಿ. ಎ. ಮತ್ತು ಡಿ. ಎ. ಗಳನ್ನು ಡ್ರಾಮಾಡುವುದು ಒಂದನ್ನು ಬಿಟ್ಟರೆ ಬೇರೇನೂ ಅವರಿಂದ ಇಲ್ಲಿ ಸಾಧ್ಯವಿಲ್ಲ. ಇವರೆಲ್ಲ ಕೈಕಾಲುಗಳು ಧೂಳಾಗದಂತೆ ಕುಳಿತಿದ್ದು ತಿಂಗಳಿಗೆ ೧೨೦೦ ರೂಪಾಯಿ ಸಂಬಳ ಪಡೆಯತಕ್ಕ ಜನರು ಮಾತ್ರ. ಹೀಗೆ ಸರ್ಕಾರದಿಂದ ಅಥವಾ ಬೋರ್ಡಿನಿಂದ ದುಡ್ಡನ್ನು ತಿನ್ನತಕ್ಕ ಮೂರು ಜನರನ್ನು ಹೆಚ್ಚಿಸುವುದಕ್ಕೆ ಇದನ್ನು ತಂದಿದ್ದಾರೆ. ಇದರಲ್ಲಿ ಏನು ಇವರ ಪಕ್ಷದ ನೀತಿ ನೇಮಕಗಳು ಅಡಕವಾಗಿದೆ ? ಅಲ್ಲದೆ ಈ ಗೃಹಮಂಡಳಿಯು ಮೈಸೂರು—ಬೆಂಗಳೂರು ಮತ್ತು ಇಂಥದೇ ಆದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಜನರಿಗೆ ಮನೆಗಳನ್ನು ಕಟ್ಟಿಸುತ್ತಿದ್ದಾರೆಯೇ ಹೊರತು ಇದು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಾವಿರಾರು ವರ್ಷಗಳಿಂದ ಹುಲ್ಲಿನ ಗುಡಿಸಲುಗಳಲ್ಲಿ ವಾಸ ಮಾಡುತ್ತಿರುವ ಜನತೆಗೇನೂ ಇವರು ಮನೆಗಳನ್ನು ಕಟ್ಟಿಸುತ್ತಿಲ್ಲ. ಇದರಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಾನು ಹೇಳುವುದಾದರೆ ಈ ಸಂಸ್ಥೆ ಯಾರಿಗೆ ಆ ಮನೆಗಳನ್ನು ಕಟ್ಟಿಸಿಕೊಡುತ್ತಿದೆ ಎಂದರೆ ಅದು ಲೋ ಇನ್‌ಕಂ ಗ್ರೂಪಿಗಲ್ಲ ಮಿಡಲ್ ಇನ್‌ಕಂ ಮತ್ತು ಹೈಯರ್ ಇನಕಂ ಇರತಕ್ಕವರಿಗೆ. ಈ ಹೈಯರ್ ಇನ್‌ಕಂ ಇರತಕ್ಕ ಜನರು ಅನೇಕ ಮನೆಗಳನ್ನು ಇಟ್ಟುಕೊಂಡಿದ್ದರೂ ಇವರು ಅನೇಕರು ತಮ್ಮ ಸಂಬಂಧೀಕರ ಹೆಸರಲ್ಲಿ ನಿವೇಶನಗಳನ್ನು ಪಡೆದು ಅದರಲ್ಲಿ ಮನೆಗಳನ್ನು ಕಟ್ಟಲು ಈ ಸಂಸ್ಥೆಯ ಸಹಾಯವನ್ನು ಪಡೆಯುತ್ತಿದ್ದಾರೆ. ? **In order to eusure the better implementation** ಎಂದು ಹೇಳಿರತಕ್ಕದ್ದು ಜನರನ್ನು ವಂಚಿಸತಕ್ಕದ್ದಾಗಿದೆ. ಇದು ಒಂದು ಕುಂಟು ನೆಪ ಮಾತ್ರ. ಇಲ್ಲಿ ಇವರಿಗೆ ನಿಜವಾಗಿಯೂ ಬಡಜನರ ಬಗ್ಗೆ ಅಷ್ಟು ಕಳಕಳಿ ಇದ್ದಿದ್ದರೆ ಈ ಮಸೂದೆಯ ವ್ಯಾಪ್ತಿಯಿಂದ ಈ ಮಿಡಲ್ ಮತ್ತು ಹೈ ಇನಕಂ ಗ್ರೂಪುಗಳನ್ನು ಕಿತ್ತುಹಾಕಿ ಇದನ್ನು ತಂದಿದ್ದರೆ ಇದನ್ನು ನಾನು ನಿಜವಾಗಿಯೂ ಸ್ವಾಗತ ಮಾಡುತ್ತಿದ್ದೆ.

ಇನ್ನು ಎರಡನೆಯದಾಗಿ ಇಲ್ಲಿ ಕೊಟ್ಟಿರತಕ್ಕ ಅಬ್‌ಜೆಕ್ಟ್ಸ್ ಆ್ಯಂಡ್ ರೀಜನ್ಸಿನಲ್ಲಿ ಈ ಸ್ವಾಯತ್ತ ಸಂಸ್ಥೆಯ ಅಧ್ಯಕ್ಷರು ಮತ್ತು ಸದಸ್ಯರುಗಳು ಸರ್ಕಾರದವರು ಇಟ್ಟುಕೊಂಡಿರುವಷ್ಟು ಕಾಲದತನಕ ಎಂದು ಹೇಳಿದೆ. ಆದರೆ ಹಿಂದೆ ಇದ್ದ ಆಕ್ಟಿನಲ್ಲಿ ಇವರೆಲ್ಲರಿಗೂ ೩ ವರ್ಷಗಳ ಒಂದು ಅವಧಿಯನ್ನು ನಿಗದಿ ಮಾಡಲಾಗಿದ್ದಿತು. ಇದರಲ್ಲಿ ಅದನ್ನು ರದ್ದು ಮಾಡಿದ್ದಾರೆ. ಅಂದರೆ ಸರ್ಕಾರದ ಮುಖ್ಯ ಮಂತ್ರಿಗಳು ವಿಧಾನಸೌಧದ ಮೂರನೆ ಮಹಡಿಯಲ್ಲಿ ಕುಳಿತು ಈ ಬೋರ್ಡಿನ ಅಧ್ಯಕ್ಷರನ್ನು ಅಥವಾ ಸದಸ್ಯರನ್ನು ಕರೆಸಿದ ಕೂಡಲೇ ಅವರು ಒಳಗೆ ಬರಬೇಕು —ಹೊರಗೆ ಹೋಗು ಎಂದ ಕೂಡಲೆ ಹೊರಗೆ ಹೋಗಬೇಕು. ಇಲ್ಲವೇ ನಿಮ್ಮನ್ನು ಕೆಲಸದಿಂದ ಕಿತ್ತು ಹಾಕಿದ್ದೇನೆ ಎಂದರೆ ಅವರು ಮನೆಗೆ ಹೋಗಬೇಕು ಅನ್ನತಕ್ಕ ರೀತಿಯಲ್ಲಿ ಇಲ್ಲಿ ಒಂದು ಕಲಂ ಸೇರಿಸಿದ್ದಾರೆ. ಇದೂ ಒಂದು ಬೆಟರ್ ಇಂಪ್ಲಿಮೆಂಟೇಷನ್ನೋ. ?

(ಸಭೆಯಲ್ಲಿ ಶ್ರೀ ಎಂ. ಬಿ, ರಾಮಸ್ವಾಮಿ ಮತ್ತು ಶ್ರೀ ಕೆ, ಪ್ರಭಾಕರ್ ಇವರು ಏಳುವುದಕ್ಕೆ ಪ್ರಯತ್ನ ಮಾಡುತ್ತಿದ್ದರು.)

ಮಾನ್ಯ ಸದಸ್ಯರುಗಳಾದ ಪ್ರಭಾಕರ್ ಮತ್ತು ರಾಮಸ್ವಾಮಿ ಇವರುಗಳಿಗೆ ಇಲ್ಲಿ ಇನ್ನೂ ಏನೂ ಗಿಟ್ಟಲಿಲ್ಲ ಅದಕ್ಕಾಗಿ ಅವರು ಬಹಳ ಪ್ರಯಾಸದಿಂದ ಸರ್ಕಾರವನ್ನು ಡಿಫೆಂಡ್ ಮಾಡಲು ಎದ್ದೆದ್ದು ನಿಲ್ಲುತ್ತಿದ್ದಾರೆ.

ಇಲ್ಲಿ ನಾನು ಮುಖ್ಯವಾಗಿ ತಿಳಿಸಬೇಕೆಂದಿರುವುದು ಏನಂದರೆ ಸಾರ್ವಜನಿಕ ಜೀವನದಲ್ಲಿ ಇರತಕ್ಕ ಒಬ್ಬ ವ್ಯಕ್ತಿಗೆ ಈ ಪ್ರಜಾಪ್ರಭುತ್ವಾಡಳಿತದಲ್ಲಿ ಗೌರವ ಅಥವಾ ಮನ್ನಣೆಗಳಿಲ್ಲ. ಅದೆಲ್ಲವು ಇಲ್ಲಿ ಒಬ್ಬ

ಸರ್ಕಾರಿ ಅಧಿಕಾರಿಯ ಪಾಲಾಗಿದೆ. ಹಿಂದಿನ ಆ್ಯಕ್ಟಿನಲ್ಲಿ ಒಬ್ಬ ಸಾರ್ವಜನಿಕ ವ್ಯಕ್ತಿಗೆ ಕೊಡಲಾಗುತ್ತಿದ್ದ ಗೌರವಗಳನ್ನು ಈ ದಿವಸ ಕಿತ್ತು ಅದನ್ನು ಒಬ್ಬ ಅಧಿಕಾರಿಗೆ ಕೊಡುವಂತೆ ಮಾಡಲು ಈ ಮಸೂದೆಯನ್ನು ತರಬೇಕಾಯಿತೆಂದು ಕಾಣುತ್ತಿದೆ. ಇದು ಇಲ್ಲಿ ನಮ್ಮ ಜನರ ಪ್ರಜಾಪ್ರಭುತ್ವ ನೀತಿ. ಹಿಂದೆ ಇದೇ ಸಭೆಯಲ್ಲಿ ಅನೇಕ ಸಂದರ್ಭಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಿಂದೆ ಮಂತ್ರಿಗಳಾಗಿದ್ದಾಗ ಮಾನ್ಯ ಬಸವಲಿಂಗಪ್ಪನವರೇ ಸರಕಾರದ ಅನೇಕ ಕೆಲಸ ಕಾರ್ಯಗಳು ಈ ಬ್ಯೂರಾಕ್ರೆಟಿಕ್ ಅಧಿಕಾರಿಗಳಿಂದ ಸುಲಲಿತವಾಗಿ ಸಾಗುತ್ತಿಲ್ಲ ಎಂದು ಹೇಳಿರತಕ್ಕ ನಿದರ್ಶನಗಳು ನೂರಾರಿವೆ. ಇಡೀ ಭರತಖಂಡದಲ್ಲೇ ಅನೇಕರು ಈ ಅಭಿಪ್ರಾಯವನ್ನು ಹೊಂದಿದ್ದಾರೆ. ಹಾಗಿದ್ದರೂ ಈ ದಿವಸ ಯಾರು ಬ್ಯೂರಾಕ್ರೆಟಿಕ್ ಅಧಿಕಾರಿಗಳನ್ನು ಒಂದು ಕಡೆ ದೂರುತ್ತಿದ್ದರೋ ಅವರೇ ಇನ್ನೊಂದು ಕಡೆ ಅವರಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಇದಕ್ಕಿಂತ ವಿಚಿತ್ರವಾದ ಆಡಳಿತಬೇಕೆ ? ಇಲ್ಲಿಯವರೆಗೂ ಏನಾದರೂ ಅಷ್ಟಿತಷ್ಟಿ ಅಷ್ಟಿಷ್ಟು ಕೆಲಸಗಳು ಈ ಸಂಸ್ಥೆಯಿಂದ ಆಗಿದ್ದರೆ ಅದು ಸಾರ್ವಜನಿಕ ವ್ಯಕ್ತಿಗೆ ಇಲ್ಲ ಏನು ಒಂದು ಅಧಿಕಾರವನ್ನು ಕೊಟ್ಟಿದ್ದುದು ಅದರಿಂದ ಅದು ಸಾಧ್ಯವಾಯಿತೇ ವಿನಾ ಇಲ್ಲದಿದ್ದರೂ ಅದೂ ಆಗುತ್ತಿರಲಿಲ್ಲ. ಅಂಥಾದ್ದನ್ನು ಕೈಬಿಡುವುದಕ್ಕೆ ಹೊರಟಿದ್ದಾರೆ.

ಕ್ಲಾಜ್ ೧೦, ಸಬ್ ಸೆಕ್ಷನ್ ೨ರಲ್ಲಿ ಈ ರೀತಿ ಹೇಳಿದೆ:—**The Board shall not execute any housing scheme or labour housing scheme unless the same has been sanctioned by the State Government.** ಇದು ನನಗರ್ಥವಾಗುವುದಿಲ್ಲ. ಅಲ್ಲಿರತಕ್ಕ ಚೇರ್ಮನರು ಕೆಲಸ ಮಾಡುತ್ತಿಲ್ಲ, ಸರ್ಕಾರದ ನೀತಿ ನಿರ್ದೇಶನಗಳನ್ನು ಅವರು ಪಾಲಿಸಿಲ್ಲ, ಎಷ್ಟೋ ಕೆಲಸಗಳು ಆಗಬೇಕಾಗಿತ್ತು. ಅದನ್ನು ಮಾಡಲಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಇವರು ಅವರಿಗೆ ಅಧಿಕಾರ ಕೊಟ್ಟು ಮಾಡಲಿಲ್ಲ ಎಂದರೆ, ಅವರ ಮೇಲೆ ಯಾವ ಉಗ್ರವಾದ ಕ್ರಮ ತೆಗೆದುಕೊಂಡರೂ ಕೂಡ ನನಗೆ ಸಂತೋಷ. ಅಂಥವರನ್ನು ಗುಂಡಿಟ್ಟು ಕೊಂದರೂ ನನಗೆ ಸಂತೋಷ. ಯಾರೇ ಆಗಿರಲಿ, ಅವರು ಯಾವ ಪಕ್ಷಕ್ಕೆ ಸೇರಿರಲೀ ಅಂಥವರ ಮೇಲೆ ಇಂಥ ಕ್ರಮ ತೆಗೆದುಕೊಂಡಿದ್ದರೂ ಜನತೆ ಅದನ್ನು ಒಪ್ಪುತ್ತಿದ್ದರು ಎಂದು ನಾನಾದರೂ ಕೂಡ ಭಾವಿಸುತ್ತೇನೆ. ಈ ರೀತಿಯಾದ ಕ್ರಮವನ್ನು ಯಾರು ತೆಗೆದುಕೊಳ್ಳುತ್ತಾರೆ? ಇಂಥ ಒಂದು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ತಯಾರು ಇಲ್ಲ. ಸರ್ಕಾರದಲ್ಲಿಯೇ ಇಂಥ ಅಧಿಕಾರವನ್ನು ಕೇಂದ್ರೀಕರಣ ಮಾಡುವುದಕ್ಕೆ ತಯಾರು ಇದ್ದಾರೆ. ಇವತ್ತು ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ೨೫ ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರು. ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ೫೦ ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರು. ಈಗ ನಾನು ನಿಮ್ಮನ್ನು ನೇರವಾಗಿ ಇಂದು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಏನಂದರೆ, ೧೫ ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೊರಟಿದ್ದೀರಲ್ಲಾ, ಈ ಮನೆಗಳ ಪಾಯವನ್ನು ಆದರೂ ಹಾಕಿದ್ದೀರಾ ? ಸರ್ಕಾರದವರೇ ಈ ಸ್ಕೀಂ ಅನು ಇಂಪ್ಲಿಮೆಂಟ್ ಮಾಡುತ್ತಿದ್ದೀರಿ, ಇದು ಎಷ್ಟರಮಟ್ಟಿಗೆ ನಡೆಯುತ್ತಿದೆ ಎನ್ನುವುದನ್ನು ನಾನು ಕೇಳುತ್ತೇನೆ. ನೀವು ಅಧಿಕಾರ ತೆಗೆದುಕೊಂಡರೂ ನೀವು ಮಾಡುತ್ತಾ ಇರತಕ್ಕದ್ದು ಏನಾಗಿದೆ. ಮಂತ್ರಿಗಳು ಕೆಲವು ಕಡೆ ಮಾತ್ರ, ತಮ್ಮ ತಾಲ್ಲೂಕಿನಲ್ಲಿ ನೂರು ಮನೆಗಳು ಆಗಿವೆ ಎಂದು ಹೇಳಿದರು, ಸಂತೋಷ. ದೇಶದಾದ್ಯಂತ ಈ ರೀತಿಯ ಕೆಲಸ ನಡೆಯುತ್ತಿದೆಯೇ ಎಂದರೆ, ಅದು ಆಗುತ್ತಿಲ್ಲ. ಅದ್ದೆಲ್ಲಾ ಗಾಳಿಗೆ ಹೋಯಿತು. ೫೦ ಸಾವಿರ ಮನೆಗಳು ಆಗಲಿಲ್ಲ, ೧೫ ಸಾವಿರ ಮನೆಗಳು ಆಗಲಿಲ್ಲ. ಈ ರೀತಿಯಾಗಿ ಇವರ ಕೆಲಸದಲ್ಲಿಯೋ ಇಷ್ಟೊಂದು ಲೋಪದೋಷಗಳು ಹೆಚ್ಚಿನ ಪ್ರಮಾಣದಲ್ಲಿ ಇದ್ದರೂ ಸಹ ನಮಗೆ ಮತ್ತೆ ಅಧಿಕಾರ ಬೇಕ ಎಂದು ಕೇಳುವುದು ನನಗಂತೂ ಅರ್ಥವಾಗುವುದಿಲ್ಲ. ಇವರ ಪಕ್ಷದ ನೀತಿ ನಿರ್ದೇಶನ, ಪಕ್ಷದ ಪಾಲಿಸಿ ಏನು ಎಂದು ನನಗೆ ಅರ್ಥವಾಗುವುದಿಲ್ಲ. ಈ ಸರ್ಕಾರ ಎತಕ್ಕೆ ಪ್ರಸಿದ್ಧಿ ಎಂದರೆ. ಈ ರೆಡ್ ಟೇಪಿಸಂ ಎನ್ನುವುದಕ್ಕೆ ಪ್ರಸಿದ್ಧಿಯಾಗಿದೆ, ಪ್ರಗತಿಪರವಾದ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ೮ ತಿಂಗಳನ್ನು ತೆಗೆದುಕೊಂಡರು. ಇಲ್ಲಿ ಕೇಂದ್ರ ಸರ್ಕಾರದವರಿಂದ ರೆಡ್ ಟೇಪಿಸಂ ಆಯಿತು ಎಂದರೂ ಇದು ಅಷ್ಟು ಸಮರ್ಪಕವಾಗಿಲ್ಲ. ಸಾಮಾನ್ಯ ಜನರಿಗೆ ತಮ್ಮ ಕೆಲಸಗಳಿಗಾಗಿ ಒಂದು ಅರ್ಜಿಯನ್ನು ಸರ್ಕಾರೀ ಕಚೇರಿಗಳಿಗೆ ಕೊಟ್ಟರೆ, ಅದನ್ನು ಪತ್ತೆ ಹಚ್ಚಬೇಕಾದರೆ ಎಷ್ಟೋ ದಿವಸಗಳು ಬೇಕಾಗುತ್ತದೆ. ಅಂಥ ಒಂದು ಪರಿಸ್ಥಿತಿ ಸರ್ಕಾರದ ಆಡಳಿತದಲ್ಲಿ ಇರುವಾಗ ಇವರು ಯಾವ ಯೋಜನೆಯನ್ನು ಹಾಕಿದರೂ ಕೂಡ. ಅದು ಆಗುವುದಿಲ್ಲ. ಯಾರಾದರೂ ಈ ಬೋರ್ಡಿಗೆ ದಕ್ಷರಾದ ಅಧ್ಯಕ್ಷರು ಬಂದರೆ, ದೇಶದಲ್ಲಿರತಕ್ಕ ಸಾಮಾನ್ಯ ಜನತೆಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎನ್ನುವ ಆಕಾಂಕ್ಷೆ ಇಟ್ಟುಕೊಂಡಿರತಕ್ಕವರು ಇದ್ದರೆ ಇವರೂ ಸಹ ಸರ್ಕಾರದ ಅನುಮತಿಯನ್ನು ಕೇಳಬೇಕು. ಅದಕ್ಕೆ ತಮ್ಮ ಅನುಮತಿ ಏಕೆಬೇಕು ? ಸಾಮಾನ್ಯ ಜನತೆಗೆ ಬೇಕಾಗಿರತಕ್ಕ ಕೆಲಸ ಮಾಡಿ. ಬೋರ್ಡಿಗೆ ಒಳ್ಳೆಯವರು ಬಂದರೂ ಕೂಡ ಒಳ್ಳೆಯ ಕೆಲಸ ಮಾಡುವುದಕ್ಕೆ ನೀವೇ ಅಡ್ಡಿ ಬರುತ್ತೀರಿ. ಇಂಥ ಒಂದು ಪ್ರಾವಿಷನ್ ಏಕೆ ಸರ್ಕಾರಕ್ಕೆ ಬೇಕು ಎಂದು ನನಗರ್ಥವಾಗುವುದಿಲ್ಲ. ಆದ್ದರಿಂದ ಇದು ದುರದ್ದೇಶದಿಂದ ತಂದಿರತಕ್ಕ ಒಂದು ಮಸೂದೆ ಎಂದು ಹೇಳಬಹುದು. ನಿಮ್ಮ

ಪಾಲಿಸೀಸ್‌ಅನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಕಾನೂನು ತೆಗೆದುಕೊಂಡು ಬನ್ನಿ, ಅದನ್ನು ಒಪ್ಪೋಣ. ಆದರೆ ಅಂಥಾದ್ದು ಯಾವದೂ ಇದರಲ್ಲಿ ಅಡಕವಾಗಿಲ್ಲ. ಸಾಮಾನ್ಯ ಜನತೆಗೆ ಪ್ರಯೋಜನವಾಗುವಂಥ ಯಾವುದೇ ಒಂದು ಪ್ರಾವಿಷನ್ ಇದರಲ್ಲಿ ಇಲ್ಲ. ಇದರಲ್ಲಿ ಹೇಳಿರುವಂತೆ ಹೆಚ್ಚಿನ ಅಧಿಕಾರ ಅಧಿಕಾರಿಗಳಿಗೆ ಬೇಕು. ಅಧಿಕಾರಿಗಳಿಗೆ ಅಧಿಕಾರವನ್ನು ಕೊಡುವುದಕ್ಕೋಸ್ಕರ ಈ ಮಸೂದೆಯನ್ನು ತಂದಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇವರು ಮಿಡ್ಲ್ ಇನ್‌ಕಂ ಮನೆಗಳನ್ನು ಕಟ್ಟಿಸುವುದು ಹೈಯರ್ ಇನ್‌ಕಂ ಮನೆಗಳನ್ನು ಕಟ್ಟಿಸುವುದು ಬರೀ ನಗರ ಪ್ರದೇಶಗಳಲ್ಲಿ ಇಂಥ ಒಂದು ಪಾಲಿಸಿಯನ್ನು ಮುಂದೆ ಬಿಟ್ಟು ಹಳ್ಳಿಗಾಡಿನಲ್ಲಿ ಮನೆಗಳನ್ನು ಕಟ್ಟಲಿಕ್ಕೆ ತಮ್ಮ ನೀತಿ ನಿರ್ದೇಶಗಳನ್ನು ಹಾಕಿಕೊಂಡರೆ ನಾನಾದರೂ ಕೂಡ ಸಂತೋಷದಿಂದ ಒಪ್ಪಿಕೊಳ್ಳುತ್ತೇನೆ. ಮಾನ್ಯ ತಿಮ್ಮಪ್ಪನವರು ಒಂದು ಮಾತನ್ನು ಹೇಳಿದರು. ಏನೆಂದರೆ ಸರ್ಕಾರ ಎಲ್ಲಾ ಅಧಿಕಾರವನ್ನು ತನ್ನ ಕೈಯಲ್ಲಿ ಇಟ್ಟುಕೊಳ್ಳಬೇಕು ಎನ್ನುವ ಮಟ್ಟಕ್ಕೆ ಬಂದಿದೆ. ಅನೇಕ ವಿಶ್ವವಿದ್ಯಾನಿಲಯಗಳನ್ನು, ಕಾಲೇಜುಗಳನ್ನು, ಅವುಗಳ ಸ್ವಾಯತ್ತತೆಯನ್ನು ಕಿತ್ತುಕೊಳ್ಳುವ ಮಟ್ಟಕ್ಕೆ ಸರ್ಕಾರ ಬಂದಿದೆ. ಸರ್ಕಾರ ಇವತ್ತು ಇರತಕ್ಕಂಥ ಅಧಿಕಾರವನ್ನು ಕೇಂದ್ರೀಕರಣ ಮಾಡುವಂಥ ಪರಿಸ್ಥಿತಿಗೆ ಈ ಮಸೂದೆ ಪೂರಕವಾಗಿದೆಯೇ ವಿನಹ ವಿಕೇಂದ್ರಿಕೃತದ ಒಂದು ಮಾತೂ ಕೂಡ ಇದರಲ್ಲಿ ಇಲ್ಲವೇ ಇಲ್ಲ, ಆದ್ದರಿಂದ ನಾನು ಮತ್ತೊಮ್ಮೆ ಮಾನ್ಯ ಮಂತ್ರಿಗಳಲ್ಲಿ. ಇದನ್ನು ವಾಪಸ್ ಪಡೆಯಬೇಕು ಎಂದು ವಿನಂತಿಸುತ್ತೇನೆ. ಭಾರತ ದೇಶದಲ್ಲಿ ಇನ್ನೊಂದು ಮಾತು ಪ್ರಚಲಿತವಾಗಿ ನಡೆಯುತ್ತಿದೆ. ಏನೆಂದರೆ, ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಅಧಿಕಾರ ಬೇಕು ಎನ್ನುವುದು. ಕೇಂದ್ರ ಸರ್ಕಾರದಿಂದ ಇಂಥ ಒಂದು ಅಧಿಕಾರವನ್ನು ಕೇಳುವಂಥ ದಾಸ್ಯತ್ವ ನಮ್ಮಲ್ಲಿ ಬರಬೇಕಾದರೆ, ನಮ್ಮ ನೈತಿಕ ಬಲ ಎಷ್ಟು ಇದೆ. ಇಂಥ ಸರ್ಕಾರದ ಕೈಗಳಿಗೆ ಇರತಕ್ಕದ್ದು ಸರಿಯೇ ಎಂದು ಯೋಚನೆ ಮಾಡಬೇಕಾಗಿದೆ. ಒಂದು ಮಾರಲ್ ಜಸ್ಟಿಫಿಕೇಷನ್ ಇಂಥ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಬೇಕು ಎಂದು ಕೇಳುವುದಾದರೆ. ಅದನ್ನು ಯೋಚನೆ ಮಾಡಬಹುದು. ಈ ಎಲ್ಲಾ ಕಾರಣಗಳಿಂದ ಮಾನ್ಯ ಮಂತ್ರಿಗಳು ಈ ಮಸೂದೆಯನ್ನು ವಾಪಸ್ ಪಡೆದು ಸಾಮಾನ್ಯ ಜನರಿಗೆ ಪ್ರಗತಿಪರವಾಗಿ ಅನುಕೂಲವಾಗುವಂಥ ಮಸೂದೆಯನ್ನು ತಂದರೆ ನಾವಾದರೂ ಕೂಡ ಸಂತೋಷದಿಂದ ಒಪ್ಪಿಕೊಳ್ಳುತ್ತೇವೆಂದು ಹೇಳುತ್ತೇನೆ. ಇಷ್ಟು, ಹೇಳಿ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER :—The House will now stand adjourned to meet again on 1st April 1974, at 1. p. m.

The House adjourned at one of the clock to meet again at one of the clock on Monday the 1st April 1974.